# Features of Caste System
# ಜಾತಿ ವ್ಯವಸ್ಥೆಯ ಲಕ್ಷಣಗಳು

ವಿದೇಶದಿಂದ ಬಂದ ವ್ಯಕ್ತಿಗೆ ಜಾತಿ ವ್ಯವಸ್ಥೆ ಎನ್ನುವ ವಿದ್ಯಮಾನವು ಎದ್ದು ಕಾಣಿಸುತ್ತದೆ. ಆ ವ್ಯವಸ್ಥೆಯ ಸಂಪೂರ್ಣ ಕಾರ್ಯನಿರ್ವಹಣೆಯನ್ನು ಅವನು ಅರ್ಥ ಮಾಡಿಕೊಳ್ಳದಿರಬಹದು, ಆದರೆ ಹಿಂದೂ ಸಮಾಜವು ವಿವಿಧ ಪ್ರಮಾಣದಲ್ಲಿ ಮಾನ್ಯತೆಯನ್ನು, ಸಾಮಾಜಿಕ ಹೊಕ್ಕು ಬಳಕೆಯ ವಲಯಗಳನ್ನು ಹೊಂದಿರುವ ಜಾತಿ ಎನ್ನುವ ಹೆಸರಿನ ವಿವಿಧ ಗುಂಪುಗಳಾಗಿ ವಿಭಜಿತಗೊಂಡಿದೆ ಎನ್ನುವುದು ಅವನ ಅರಿವಿಗೆ ಬರುತ್ತದೆ. ಬ್ಲೈನ್ಸ್ ಹೇಳುವಂತೆ: ಈ ದೇಶದಲ್ಲಿ ಸಾಮಾನ್ಯ ವೀಕ್ಷಕನೊಬ್ಬನಿಗೂ ಸಹ ಈ ಸಂಸ್ಥೆಯ ವ್ಯಾಪಕತೆಯನ್ನು ಮನಗಾಣಲು ಮತ್ತು ಅದರ ಕೆಲವು ಸಾಮಾನ್ಯ ಲಕ್ಷಣಗಳ ಪರಿಚಯವಾಗಲು ಹೆಚ್ಚು ಹೊತ್ತು ಬೇಕಿಲ್ಲ"[1] ಭಾರತದಲ್ಲಿ ಜಾತಿಯು ಒಂದು ಸಾಮಾನ್ಯವಾದ ಸಾಮಾಜಿಕ ಸಂಘಟನೆಯಾಗಿದೆ ಎನ್ನುವುದೊಂದೆ ಇದಕ್ಕೆ ಕಾರಣವಲ್ಲ, ಯುರೋಪ್ ಹಾಗೂ ಅಮೇರಿಕಾದಲ್ಲಿ ಚಾಲ್ತಿಯಲ್ಲಿರುವ ಸಾಮಾಜಿಕ ಗುಂಪುಗಳಿಗಿಂತ ಇದು ಅತ್ಯಂತ ಭಿನ್ನವಾಗಿದೆ ಎನ್ನುವುದೂ ಸಹ ಒಂದು ಕಾರಣವಾಗಿದೆ. ಸರ್ವವ್ಯಾಪಕತೆ, ಮತ್ತು ಅಪರಿಚತತೆ – ಈ ಎರಡು ಲಕ್ಷಣಗಳು ಹಲವು ಸಮರ್ಥ ಪಂಡಿತರುಗಳು ಈ ಸಂಸ್ಥೆಯ ಅಧ್ಯಯನದಲ್ಲಿ ತೊಡಗುವಂತೆ ಮಾಡಿದೆ. ಈ ವಿದ್ಯಾರ್ಥಿಗಳ ಇಷ್ಟೆಲ್ಲ ಶ್ರಮದ ಹೊರತಾಗಿಯೂ ಜಾತಿ ಬಗ್ಗೆ ಒಂದು ಸರ್ವಮಾನ್ಯವಾದ ವ್ಯಾಖ್ಯಾನವಿನ್ನೂ ನಮಗೆ ದೊರೆತಿಲ್ಲ. ನನಗನಿಸುವಂತೆ ಈ ವಿದ್ಯಮಾನದ ಸಂಕೀರ್ಣತೆಯನ್ನು ನೋಡಿದರೆ ಒಂದು ವ್ಯಾಖ್ಯಾನವನ್ನು ಕೊಡಲು ಮಾಡುವ ಯಾವುದೇ ಪ್ರಯತ್ನವೂ ಸಫಲವಾಗುವುದಿಲ್ಲ. ಇದಕ್ಕೆ ವಿರುದ್ಧವಾಗಿ ಈ ವಿಷಯವನ್ನು ಕುರಿತ ಬಹಳಷ್ಟು ಸಾಹಿತ್ಯದಲ್ಲಿ ಈ ಪದಗುಚ್ಛದ ಬಗ್ಗೆ ಸ್ಪಷ್ಟತೆಯ ಕೊರತೆ ಎದ್ದು ಕಾಣಿಸುತ್ತದೆ. ಹಾಗಾಗಿ, ನಾನು ಜಾತಿಗಳ ವ್ಯವಸ್ಥೆಯ ಬುನಾದಿಯಾಗಿರುವ ಅಂಶಗಳ ವಿವರಣೆಯ ಪ್ರಸ್ತಾವನೆಯನ್ನು ಮುಂದಿಡಲು ಬಯಸುತ್ತೇನೆ.

ಈ ಸಂಸ್ಥೆಯ ಕುರಿತು, ತೀರಾ ಪ್ರಾಚೀನ ವಿವರ ದೊರಕುವುದು ಕ್ರಿ.ಪೂ. ಮೂರನೆಯ ಶತಮಾನದ ವಿದೇಶಿಯೊಬ್ಬನ ನಿರೂಪಣೆಯಲ್ಲಿ. ಇದರಲ್ಲಿ ಆತ ಪಶ್ಚಿಮ ಯುರೋಪ್‌ನ ನಿಕಟ ಸಾಂಸ್ಕೃತಿಕ ಸಂಪರ್ಕದಿಂದ ಪರಿವರ್ತನೆಗಳಾಗುವುದಕ್ಕೂ ಪೂರ್ವದಲ್ಲಿ ಈ ಸಂಸ್ಥೆ ಹೊಂದಿದ್ದ ಎರಡು ಲಕ್ಷಣಗಳನ್ನು ಉಲ್ಲೇಖಿಸುತ್ತಾನೆ: "ಮತ್ತೊಂದು ಜಾತಿಯವನೊಡನೆ ಮದುವೆಯಾಗುವುದಕ್ಕೆ ಅವಕಾಶವಿರಲಿಲ್ಲ, ಒಂದು ವೃತ್ತಿ ಅಥವಾ ಕಸುಬಿನಿಂದ ಮತ್ತೊಂದಕ್ಕೆ ಬದಲಾಯಿಸುವ ಅವಕಾಶವೂ ಇರಲಿಲ್ಲ, ಒಬ್ಬ ತತ್ವಜ್ಞಾನಿಯ – ಅವನ ಘನತೆಯ ಕಾರಣಕ್ಕಾಗಿ ಒಪ್ಪಿಗೆ ನೀಡಲಾಗಿದ್ದರ ಹೊರತಾಗಿ – ಒಬ್ಬ ವ್ಯಕ್ತಿ ಒಂದಕ್ಕಿಂತ ಹೆಚ್ಚು ಕಸುಬಿನಲ್ಲಿ ತೊಡಗುವಂತಿರಲಿಲ್ಲ." ಮೆಗಸ್ತಿನಿಸನ ಈ ಹೇಳಿಕೆಯು ಈ ಸಂಸ್ಥೆಯ ಎರಡು ಪ್ರಮುಖ ಲಕ್ಷಣಗಳನ್ನು ಮುಂಚೂಣಿಗೆ ತಂದಿತಾದರೂ ವ್ಯವಸ್ಥೆಯ ಸಂಪೂರ್ಣ ಚಿತ್ರಣವನ್ನು ನೀಡಲು ಇದು ವಿಫಲವಾಯಿತು.

ಹಿಂದೂ ಸಮಾಜವು ಹಕ್ಕು ಮತ್ತು ಕರ್ತವ್ಯಗಳಂತಹ ಆಧುನಿಕ ವಿಚಾರಗಳಿಂದ ಬಾಧಿತವಾಗದಿದ್ದ ಜಾತಿಯ ಸಾಮಾಜಿಕ ತಾತ್ವಿಕತೆಯ ಅಡಿಯಲ್ಲಿದ್ದಾಗ ಎದ್ದು ಕಾಣುವ ಆರು ಲಕ್ಷಣಗಳನ್ನು ಹೊಂದಿತ್ತೆಂದು ಗುರುತಿಸಬಹುದು.

( ಅ ) ಸಮಾಜದ ವಿಭಾಗೀಯ ವಿಂಗಡಣೆ: ಈ ಜಾತಿ ಸಮಾಜದಲ್ಲಿದ್ದ ಯಾವುದೇ ಬಗೆಯ ಸಾಮಾಜಿಕ ಸ್ಥಾನಮಾನಗಳ ನಡುವಿನ ಭಿನ್ನತೆಗಳು ಹಿನ್ನೆಲೆಗೆ ಸರಿದಿದ್ದು ಅವುಗಳ ಬಗ್ಗೆ ತಿಳಿದುಕೊಳ್ಳಬೇಕಾದರೆ ವಿಶೇಷವಾಗಿ ವಿಚಾರಿಸಬೇಕಾಗಿದ್ದರಿಂದ ಇದೊಂದು ಸುಸಂಬದ್ಧ ಸಮಾಜವಾಗಿರಲಿಲ್ಲ, ಆದರೆ ವಿವಿಧ ನಾಮಧೇಯಗಳನ್ನು ಹೊಂದಿದ್ದ ಗುಂಪುಗಳೇ

ಪ್ರಧಾನವಾಗಿದ್ದ ಒಂದು ಸಮಾಜವಾಗಿತ್ತು. ಜಾತಿಗಳು ತಮ್ಮದೇ ಆದ ಸಮಗ್ರ ಬದುಕನ್ನು ಹೊಂದಿದ್ದ ಗುಂಪುಗಳಾಗಿದ್ದವು. ಇವು ಸ್ವಯಂಸೇವಾ ಸಂಘ ಅಥವಾ ವರ್ಗಗಳಂತಿರಲಿಲ್ಲ, ಇಲ್ಲಿನ ಸದಸ್ಯತ್ವವು ಸ್ವಂತ ಆಯ್ಕೆಯಾಗಿರದೆ ಹುಟ್ಟಿನಿಂದ ನಿರ್ಧರಿಸಲ್ಪಡುತ್ತಿತ್ತು. ಒಬ್ಬ ವ್ಯಕ್ತಿಯ ಸ್ಥಾನಮಾನವು ಯುರೋಪಿನಲ್ಲಿ ಆಗುತ್ತಿದ್ದ ಹಾಗೆ ಅವನ ಸಂಪತ್ತಿನ ಆಧಾರದ ಮೇಲೆ ನಿರ್ಧಾರವಾಗುತ್ತಿರಲಿಲ್ಲ ಬದಲಿಗೆ ಯಾವ ಜಾತಿಯಲ್ಲಿ ಹುಟ್ಟುವ ಅದೃಷ್ಟ ಅವನಿಗಿತ್ತು ಎನ್ನುವುದರ ಮೇಲೆ ನಿರ್ಧಾರವಾಗುತ್ತಿತ್ತು. ಮ್ಯಾಕ್‌ಐವರ್ ಹೇಳುವಂತೆ ಸ್ಪಷ್ಟವಾಗಿರುವ ಗುಂಪುಗಳ ನಡುವಿನ ಕಂದರಗಳಿಗೆ ಸಂಬಂಧಿಸಿದಂತೆ ಜಾತಿ ಮತ್ತು ವರ್ಗಗಳ ಭಿನ್ನತೆಯು: "ಪೌರ್ವಾತ್ಯ ನಾಗರಿಕತೆಗಳಲ್ಲಿ ಹುಟ್ಟು, ವರ್ಗ ಮತ್ತು ಸ್ಥಾನಮಾನದ ನಿರ್ಧಾರಕ ಅಂಶವಾಗಿದ್ದರೆ, ಇಂದಿನ ಪಶ್ಚಿಮದ ನಾಗರಿಕತೆಯಲ್ಲಿ ಸಂಪತ್ತು ಅದರಷ್ಟೇ ಅಥವಾ ಅದಕ್ಕೂ ಹೆಚ್ಚಿನ ರೀತಿಯಲ್ಲಿ ವರ್ಗ-ನಿರ್ಧಾರಕ ಅಂಶವಾಗಿದೆ, ಮತ್ತು ಒಂದು ನಿರ್ಧಾರಕ ಅಂಶವಾಗಿ ಸಂಪತ್ತು ಹುಟ್ಟಿನಷ್ಟು ಅನಮ್ಯವಾಗಿರುವುದಿಲ್ಲ: ಅದು ಹೆಚ್ಚು ಮೂರ್ತಸ್ವರೂಪದ್ದಾಗಿರುತ್ತದೆ, ಮತ್ತು ಹಾಗಾಗಿ, ಅದರ ಪ್ರತಿಪಾದನೆಗಳನ್ನು ಸುಲಭವಾಗಿ ಪ್ರಶ್ನಿಸಿಬಹುದಾಗಿದೆ; ಇದು ಪ್ರಮಾಣದ ಸ್ವರೂಪದಲ್ಲಿರುವುದರಿಂದ, ಇದರಲ್ಲಿ ವಿವಿಧ ವಿಧಗಳ ಭಿನ್ನತೆ ಇರುವುದಿಲ್ಲ, ಇದನ್ನು ಪರಕೀಯಗೊಳಿಸಲಾಗುವುದಿಲ್ಲ, ತನ್ನದಾಗಿಸಿಕೊಳ್ಳಲು ಸಾಧ್ಯವಿಲ್ಲ ಮತ್ತು ವರ್ಗಾಯಿಸಲಾಗುವುದಿಲ್ಲ, ಮತ್ತು ಇದು ಹುಟ್ಟಿನ ಹಾಗೆ ಶಾಶ್ವತವಾದ ಕಂದರವನ್ನು ನಿರ್ಮಿಸುವುದಿಲ್ಲ." ಮರಾಠ ಪ್ರದೇಶಕ್ಕೆ ನನ್ನನ್ನು ಸೀಮಿತಗೊಳಿಸಿಕೊಂಡು ಹೇಳುವುದಾದರೆ ಒಬ್ಬ ವ್ಯಕ್ತಿಯು ಒಬ್ಬ ಬ್ರಾಹ್ಮಣ, ಪ್ರಭು, ಮರಾಠ, ವಣಿ, ಸೋನಾರ, ಸುತಾರ, ಭಂಡಾರಿ, ಚಂಬಾರ, ಅಥವಾ ಮಹಾರ್ ಇತ್ಯಾದಿಯಾಗಿ ಹುಟ್ಟುತ್ತಾನೆ. ಒಂದು ನಿರ್ದಿಷ್ಟ ಜಾತಿಗೆ ನಿಗದಿಪಡಿಸಿದ ವೃತ್ತಿಯನ್ನು ಬಿಟ್ಟು ಮತ್ತೊಂದು ವೃತ್ತಿಯನ್ನು – ಉದಾ, ಮಿಲಿಟರಿ – ತೆಗೆದುಕೊಂಡರೂ ಕೂಡ ಅವನು ತನ್ನ ಜಾತಿಯಲ್ಲೇ ಉಳಿದಿರುತ್ತಾನೆ. ಒಬ್ಬ ಬ್ರಾಹ್ಮಣ ಜನರಲ್ ಮತ್ತು ಒಬ್ಬ ಮರಾಠ ಜನರಲ್ ಇವರಿಬ್ಬರೂ ಸೈನ್ಯದಲ್ಲಿ ಒಂದೇ ಸ್ಥಾನಮಾನವನ್ನು ಹೊಂದಿದ್ದರೂ ಕೂಡ ಅವರ ಖಾಸಗಿ ಬದುಕಿನಲ್ಲಿ ಅವರು ವಿಭಿನ್ನ ಸ್ಥಾನಮಾನಗಳ ಗುಂಪುಗಳಿಗೆ ಸೇರಿರುತ್ತಾರೆ, ಮತ್ತು ಅವರಿಬ್ಬರ ನಡುವೆ ಸಮಾನ ನೆಲೆಯಲ್ಲಿ ಯಾವುದೇ ಪರಸ್ಪರ ಸಾಮಾಜಿಕ ಸಂಬಂಧಗಳಿರುವುದಿಲ್ಲ. ಆದರೆ ವೃತ್ತಿ ಮತ್ತು ಅದರ ಪರಿಣಾಮವಾದ ಆದಾಯದ ಮೇಲೆ ಸ್ಥಾನಮಾನವು ನಿರ್ಧಾರವಾಗುವ ವರ್ಗ ಸಮಾಜಗಳಲ್ಲಿ ಹೀಗಾಗುವುದಿಲ್ಲ. ಇಡೀ ಸಮುದಾಯಕ್ಕೆ ಅನ್ವಯಿಸುವ ನಿಯಮಗಳನ್ನು ಹೊರತುಪಡಿಸಿ ತನ್ನ ಸದಸ್ಯರ ನೈತಿಕತೆಯ ಬಗ್ಗೆ ಮಾರ್ಗದರ್ಶನ ನೀಡುವ ಯಾವದೇ, ಸ್ಥಾಯಿ ಅಥವಾ ಸಾಂದರ್ಭಿಕ, ಸಮಿತಿಗಳನ್ನು ವರ್ಗವು ಹೊಂದಿರುವುದಿಲ್ಲ. ಒಂದು ವರ್ಗದ ಸದಸ್ಯರು ವಿವಿಧ ವೃತ್ತಿಗಳನ್ನು ಅನುಸರಿಸುತ್ತಾರೆ. ಅಂತಹ ವೃತ್ತಿಗಳು ಸಂಘಟಿತವಾಗಿದ್ದಾಗ ಅಲ್ಲಿ ನಿರ್ವಾಹಕ ಮಂಡಳಿಗಳು ಇರುತ್ತವೆ ಅವು ತಮ್ಮ ನಿಯಮಗಳಿಗೆ ಅನುಸಾರವಾಗಿ ಸದಸ್ಯರನ್ನು ನಿಯಮಗಳಿಗೆ ಒಳಪಡಿಸುತ್ತವೆ. ಅಂತಹ ನಿಯಮಗಳು ಸಾಮಾನ್ಯವಾಗಿ ವಿಶಾಲವಾದ ಸಮುದಾಯದ ನ್ಯಾಯಸಮ್ಮತವಾದ ಕ್ಷೇತ್ರವನ್ನು ಹೊರತುಪಡಿಸಿ ಕೇವಲ ವೃತ್ತಿಯ ರೀತಿ ರಿವಾಜುಗಳಿಗೆ ಅಥವಾ ಆರ್ಥಿಕ ಲಾಭಕ್ಕೆ ಸಂಬಂಧಿಸಿರುತ್ತವೆ. "ಬೌದ್ಧಿಕ ಆದರೆ ವೃತ್ತಿಗಳಿಗೆ ಸಂಬಂಧಿಧಿಸಿದಂತೆ ಇಂತಹ ಸಾಮಾನ್ಯ ನಿಯಮಗಳು ಮತ್ತು ಅಧಿಕೃತವಾದ ನಿರ್ದೇಶನಗಳು ಪ್ರವೇಶಕ್ಕಿರುವ ಅರ್ಹತೆ, ತರಬೇತಿಯ ಲಕ್ಷಣಗಳು, ಸಂಬಳದ ವಿಧಾನ, ನೇಮಕಾತಿಯ ನಿರ್ಬಂಧಗಳು, ಸಾರ್ವಜನಿಕರು ಮತ್ತು ತಮ್ಮ ಸಹ ವೃತ್ತಿಯರೊಂದಿಗೆ ನಡೆದುಕೊಳ್ಳಬೇಕಾದ ರೀತಿ, ಸಾರ್ವಜನಿಕ ಹುದ್ದೆಗಳಿಗೆ ಅನ್ವಯಿಸುವ ನೇಮಕಾತಿಯ ವಿಧಾನಗಳು ಮತ್ತು ಅರ್ಹತೆಗಳು, ಸೇವಾವಧಿಯ ಷರತ್ತುಗಳು, ವೃತ್ತಿಯ ಸ್ಥಾನಮಾನವನ್ನು

ಕಾಪಾಡುವುದು, ಮತ್ತು ಕೆಲಸದಿಂದ ತೆಗೆದು ಹಾಕುವ ಅಧಿಕಾರಗಳಿಗೆ ಸಂಬಂಧಿಸಿರುತ್ತವೆ." ಇದಕ್ಕೆ ವ್ಯತಿರಿಕ್ತವಾಗಿ ಬಹಳಷ್ಟು ಜಾತಿಗಳು, ಉನ್ನತ ಜಾತಿಗಳಾದ ಬ್ರಾಹ್ಮಣ ಮತ್ತು ರಜಪೂತರಂಹವರನ್ನು ಹೊರತುಪಡಿಸಿ, ಕಾರ್ಮಿಕ ಒಕ್ಕೂಟಗಳು, ಸಂಘಗಳು, ಅಥವಾ ವೃತ್ತಿ ಸಂಘಗಳು (ಗಿಲ್ಡ್‌ಗಳು) ನಿರ್ಧರಿಸುವ ವಿಷಯಗಳಿಗಿಂತ ಹೆಚ್ಚಾದ ವಿಷಯಗಳ ಬಗ್ಗೆ ತೀರ್ಪು ನೀಡುತ್ತವೆ ಮತ್ತು ಹಾಗಾಗಿ ಸಮುದಾಯದ ಸಮಗ್ರ ಕ್ಷೇತ್ರವನ್ನೇ ಇವು ಅತಿಕ್ರಮಿಸುತ್ತವೆ. ಬ್ರಾಹ್ಮಣರು ಮತ್ತು ಇತರ ಜಾತಿಯವರು ತಮ್ಮ ವ್ಯವಹಾರಗಳನ್ನು ಹೇಗೆ ನಿರ್ವಹಿಸುತ್ತಿದ್ದರು ಎನ್ನುವುದರ ಬಗ್ಗೆ ಸ್ಪಷ್ಟತೆ ಇಲ್ಲ, ಆದರೆ ಕನಿಷ್ಟ ಪಕ್ಷ ದಕ್ಷಿಣ ಭಾರತದ ಬ್ರಾಹ್ಮಣರಿಗೆ ಸಂಬಂಧಿಸಿದಂತೆ ಶಿಲಾಶಾಸನಗಳನ್ನು ಆಧರಿಸಿ ಹೇಳುವುದಾದರೆ, ಸಂದರ್ಭ ಬಂದಾಗ ಅವರು ಜಾತಿಯ ಸದಸ್ಯರ ವಿಶೇಷ ಸಭೆಯನ್ನು ಕರೆಯುತ್ತಿದ್ದರು. ಸಭೆಯ ತೀರ್ಮಾನವನ್ನು ರಾಜನ ಅಧಿಕಾರಿಗಳು ಅನುಷ್ಠಾನಗೊಳಿಸುತ್ತಿದ್ದರು. ಜಾತಿಯ ನಿರ್ವಾಹಕ ಮಂಡಳಿಯನ್ನು ಪಂಚಾಯತಿ ಎಂದು ಕರೆಯಲಾಗುತ್ತಿತ್ತು. ಅದರ ವಿಚಾರಣೆಗೊಳಪಡುತ್ತಿದ್ದ ಕೆಲವು ಅಪರಾಧಗಳೆಂದರೆ: (ಅ) ನಿಷೇಧಿಸಲ್ಪಟ್ಟ ಜಾತಿ ಮತ್ತು ಉಪಜಾತಿಗಳ ಜನರೊಂದಿಗೆ ತಿನ್ನುವುದು, ಕುಡಿಯುವುದು, ಅಥವಾ ಅದೇ ತರಹದ ವ್ಯವಹಾರವನ್ನಿಟ್ಟುಕೊಳ್ಳುವುದು; (ಆ) ಮತ್ತೊಂದು ಜಾತಿಯ ಹೆಂಗಸನ್ನು ಪ್ರೇಯಸಿಯಾಗಿಟ್ಟುಕೊಳ್ಳುವುದು, ವ್ಯಭಿಚಾರ (ಇ) ವಿವಾಹಿತ ಮಹಿಳೆಯನ್ನು ನೀತಿಭ್ರಷ್ಟಳನ್ನಾಗಿಸುವುದು ಅಥವಾ ಅವಳೊಂದಿಗೆ ವಿವಾಹೇತರ ಸಂಬಂಧ ಇಟ್ಟುಕೊಳ್ಳುವುದು; (ಈ) ವಿವಾಹದ ಸಂಂದರ್ಭದಲ್ಲಿ ನೀಡಿದ ಭರವಸೆಯನ್ನು ಈಡೇರಿಸದೇ ಇರುವುದು; (ಉ) ವಯಸ್ಸಿಗೆ ಬಂದ ಹೆಂಡತಿಯನ್ನು ಗಂಡನೊಂದಿಗೆ ಕಳುಹಿಸಲು ನಿರಾಕರಿಸುವುದು; (ಊ) ಹೆಂಡತಿಯನ್ನು ನೋಡಿಕೊಳ್ಳಲು ನಿರಾಕರಿಸುವುದು; (ಋ) ಸಾಲವನ್ನು ತೀರಿಸದೆ ಇರುವುದು; (ಎ) ಹಲ್ಲೆ ಮಾಡುವುದು; (ಏ) ಜಾತಿಗೆ ವಿಶಿಷ್ಟವಾದ ರೂಢಿ ಸಂಪ್ರದಾಯಗಳನ್ನು ಮುರಿಯುವುದು; (ಐ) ಮತ್ತೊಬ್ಬನ ಗ್ರಾಹಕನನ್ನು ಅತಿಕ್ರಮಿಸುವುದು ಮತ್ತು ಬೆಲೆಯನ್ನು ಏರಿಸುವುದು ಅಥವಾ ಇಳಿಸುವುದು; (ಒ) ಹಸು ಅಥವಾ ಇನ್ನಾವುದೇ ನಿಷೇಧಿತ ಪ್ರಾಣಿಯನ್ನು ಕೊಲ್ಲುವುದು; (ಓ) ಬ್ರಾಹ್ಮಣನಿಗೆ ಅವಮಾನ ಮಾಡುವುದು; (ವಿವಾಹ ಮತ್ತು ಇತರ ಸಮಾರಂಭಗಳಲ್ಲಿ ಹಬ್ಬಗಳ ಸಂದರ್ಭದಲ್ಲಿ) ಜಾತಿಯ ಕಟ್ಟಳೆಗಳನ್ನು ಮುರಿಯುವುದು. ಕೆಲವು ಅಪರಾಧಗಳನ್ನು ಕುರಿತು ಜಾತಿಯ ಆಡಳಿತ ಮಂಡಳಿಗಳು ನಡೆಸಿದ ವಿಚಾರಣೆಯು ಸಾಮಾನ್ಯವಾಗಿ ರಾಜಕೀಯ ಪ್ರಭುತ್ವವು ತನ್ನ ನ್ಯಾಯಿಕ ಅಧಿಕಾರವನ್ನು ಬಳಸಿ ನಡೆಸುವಂತಹ ವಿಚಾರಣೆಗಳಾಗಿದ್ದವು ಎನ್ನುವುದು ಈ ಪಟ್ಟಿಯನ್ನು ನೋಡಿದಾಗ ನಮಗೆ ತಿಳಿಯುತ್ತದೆ. ಹಾಗಾಗಿ ಜಾತಿ ಎನ್ನುವುದು ತನ್ನ ಸದಸ್ಯರಿಗೆ ನ್ಯಾಯದ ತೀರ್ಮಾನಗಳನ್ನು ನೀಡುವ ಪ್ರತ್ಯೇಕ ವ್ಯವಸ್ಥೆಯನ್ನು ಹೊಂದಿರುವಂತಹ ಒಂದು ಗುಂಪಾಗಿತ್ತು. ಮತ್ತು ಇದು ಹಲವು ಜಾತಿಗಳನ್ನು ಒಳಗೊಂಡ ಇಡೀ ಸಮುದಾಯವನ್ನು ಹೊರತುಪಡಿಸಿದ ಗುಂಪಾಗಿತ್ತು. ಆದ್ದರಿಂದ ಕಾನೂನಿನಿಂದ ನಿರ್ಬಂಧಿಸಲ್ಪಟ್ಟ ನೈತಿಕ ನಿಯಮಗಳಿಗೆ ಸಂಬಂಧಿಸಿದಂತೆ ಜಾತಿಯ ಸದಸ್ಯರುಗಳು ಸಮಗ್ರ ಸಮುದಾಯದ ಸದಸ್ಯರಾಗಿರಲಿಲ್ಲ. ಕಾನೂನಿನ ನ್ಯಾಯಲಯವು ತೀರ್ಪು ನೀಡಿದ ಅಪರಾಧಗಳನ್ನು ಪುನರ್ವಿಚಾರಣೆಗೆ ಒಳಪಡಿಸಲು ಜಾತಿ ಮಂಡಳಿಗಳು ತಯಾರಾಗಿದ್ದವು ಎನ್ನುವ ವಿಷಯವು ಜಾತಿಯ ಅರೆ ಸಾರ್ವಭೌಮತ್ವದ ಕಡೆ ನಮ್ಮ ಗಮನವನ್ನು ವಿಶೇಷವಾಗಿ ಸೆಳೆಯುತ್ತದೆ. ಜಾತಿಯ ಕಟ್ಟುಪಾಡಿಗೊಳಪಟ್ಟ ಈ ಸಮಾಜದಲ್ಲಿ ಸಮುದಾಯದ ಭಾವನೆಗಳಿಗೆ ತಡೆಯೊಡ್ಡಲಾಗಿತ್ತು, ಮತ್ತು ಪೌರರ ನೈತಿಕ ಬದ್ಧತೆಯ ಮೊದಲ ಆದ್ಯತೆ ಸಮಗ್ರ ಸಮುದಾಯದ ಬದಲಾಗಿ ಜಾತಿಗೆ ಸೀಮಿತವಾಗಿತ್ತು ಎನ್ನುವುದು ಇದರ ಅರ್ಥವಾಗಿದೆ. ಈ ಅಂಶವು ವಿಭಾಗೀಯ ವಿಭಜನೆಗೆ ಸತ್ವವನ್ನು ನೀಡಿತು ಎನ್ನುವುದನ್ನು ನಾನು

ಹೇಳಬಯಸುತ್ತೇನೆ. ಈ ಮಂಡಳಿಗಳು ನೀಡುತ್ತಿದ್ದ ಶಿಕ್ಷೆಗಳೆಂದರೆ: (ಅ) ಜಾತಿಯಿಂದ ಬಹಿಷ್ಕಾರ – ತಾತ್ಕಾಲಿಕ ಅಥವಾ ಶಾಶ್ವತವಾಗಿ; (ಆ) ದಂಡ; (ಇ) ಜಾತಿಯವರಿಗೆ ಹಬ್ಬವನ್ನು ಎರ್ಪಡಿಸುವುದು; (ಈ) ದೈಹಿಕ ಹಿಂಸೆ; ಮತ್ತು (ಉ) ಕೆಲವೊಮ್ಮೆ ಧಾರ್ಮಿಕ ಪ್ರಾಯಶ್ಚಿತ್ತ. ದಂಡ ವಸೂಲಿಯಂದ ಬಂದ ಹಣವನ್ನು ಸಾಮಾನ್ಯವಾಗಿ ಎಲ್ಲರಿಗೂ ಹಬ್ಬವನ್ನು ಏರ್ಪಡಿಸಲು ಉಪಯೋಗಿಸಲಾಗುತ್ತಿತ್ತು. ಕೆಲವೊಮ್ಮೆ ಮೊದಲೆ ನಿರ್ಧರಿಸಿದ್ದ ಪಂಚಾಯತಿಯ ಅಗತ್ಯಗಳನ್ನು ಪೂರೈಸಲು ಅವುಗಳನ್ನು ಉಪಯೋಗಿಸಲಾಗುತ್ತಿತ್ತು. ಮತ್ತೆ ಕೆಲವು ಬಾರಿ ದಾನ ಮಾಡುವ ಉದ್ದೇಶಕ್ಕಾಗಿ ಬಳಸಲಾಗುತ್ತಿತ್ತು. ಜಾತಿ ಮಂಡಳಿಗಳ ಈ ವಿವರಣೆಯು ನಮಗೆ "ಜಾತಿಯು ತನ್ನನ್ನು ತಾನೆ ಆಳಿಕೊಳ್ಳುತ್ತಿತ್ತು" ಎನ್ನುವ ಹೇಳಿಕೆಯ ಅರ್ಥವನ್ನು ಸ್ಪಷ್ಟಪಡಿಸುತ್ತದೆ. ಕಾನೂನಿನ ಅಳವಡಿಕೆಯಲ್ಲಿದ್ದ ವೈವಿಧ್ಯವು ವಿವಿಧ ಜಾತಿಗಳಲ್ಲಿದ್ದ ನೈತಿಕ ಮಾನದಂಡಗಳಲ್ಲಿರುವ ಭಿನ್ನತೆಗೆ ಕಾರಣವಾಗಿತ್ತು. ಹಾಗಾಗಿ ಜಾತಿಗಳ ನಡುವೆ ಸಾಂಸ್ಕೃತಿಕ ಕಂದರವೇರ್ಪಟ್ಟಿತು. ನಾನು ಗುರುತಿಸುವ ಜಾತಿಗಳಲ್ಲಿದ್ದ ಸಾಂಸ್ಕೃತಿಕ ಭಿನ್ನತೆಗಳ ಕೆಲವು ಅಂಶಗಳು ವಿಭಾಗೀಕರಣದಲ್ಲಿ ಅಂತರ್ಗತವಾಗಿರುವ ಇಂಗಿತಗಳನ್ನು ಸ್ಪಷ್ಟಪಡಿಸುತ್ತವೆ. ದಕ್ಷಿಣ ಭಾರತದಲ್ಲಿರುವ ಅಂತಹ ಜಾತಿಗಳಲ್ಲಿ ಈ ಕೆಳಗಿನ ಜಾತಿಗಳನ್ನು ಗಮನಸಿಬಹುದಾಗಿದೆ:

ಅನೇಕ ಜಾತಿಗಳು ತಮ್ಮದೇ ಆದ ವಿಶೇಷ ದೇವತೆಗಳನ್ನು ಹೊಂದಿರುತ್ತವೆ. ಅಂತಹ ಜಾತಿಗಳಲ್ಲಿ ಈ ಕೆಳಗಿನವುಗಳನ್ನು ಗಮನಿಸಬಹುದಾಗಿದೆ. ದಕ್ಷಿಣ ಭಾರತದ ಕೋಮಟಿ, ಕಂಸಾಳ, ಗಮಲ್ಲ, ಈಡಿಗ, ಮಾಲ ಮತ್ತು ಮಾದಿಗ ; ಕೇಂದ್ರ ಪ್ರಾಂತ್ಯದ ಅಹಿರ್ ; ಉತ್ತರ ಪ್ರದೇಶದ, ಅಹೆರಿಯ, ಬಹೆಲಿಯಾ, ಕಾರ್‌ವರ್, ಕೊರ್ವ, ಚೆರೊ, ಬುಯ್ಯಾರ್, ಡಮ್, ಮುಷಾಹರ್ ಮತ್ತು ನೈ ; ಮತ್ತು ಗುಜರಾತ್‌ನ ವೈಶ್ಯರು ; ಮದರಾಸಿನ ಜಾತಿಗಳಲ್ಲಿರುವ ರಿಲಿಜಿಯಸ್ ದೃಷ್ಟಿಕೋನಗಳ ಭಿನ್ನತೆಗಳ ಬಗ್ಗೆ ಹೀಗೆ ಹೇಳಲಾಗಿದೆ: "ಬ್ರಾಹ್ಮಣ ಸಮುದಾಯಕ್ಕೆ ಸಂಬಂಧಿಸಿದಂತೆ ಒಂದು ವಿಷಯ ಸ್ಪಷ್ಟ ಹಾಗೂ ವಿಶಿಷ್ಟವಾಗಿದೆ, ಮೂಲ ನಿವಾಸಿಗಳು ಶ್ರದ್ಧೆಯಿಂದ ತಲೆಬಾಗುವ ಗ್ರಾಮದೇವತೆಯನ್ನು ಅವರು ಪೂಜಿಸುವುದಿಲ್ಲ." ವಿವಾಹ ಮತ್ತು ಸಾವಿನ ಆಚರಣೆಗಳಲ್ಲಿ ವಿವಿಧ ಜಾತಿಗಳ ನಡುವೆ ಬಹಳಷ್ಟು ವ್ಯತ್ಯಾಸಗಳಿವೆ. ಬ್ರಾಹ್ಮಣರು ಜಾತಿಯ ಆಚರಣೆಯಾಗಿ ವಿಧವಾ-ವಿವಾಹವನ್ನಾಗಲಿ ಉಪಪತ್ನಿ ಪದ್ಧತಿಯನ್ನಾಲಿ ಒಪ್ಪುತ್ತಿರಲಿಲ್ಲ. ಕೆಳಗಿನ ಜಾತಿಯವರಿಗೆ ಸಂಬಂಧಿಸಿದಂತೆ ಈ ಮಾತನ್ನು ಹೇಳಲಾಗುವುದಿಲ್ಲ. ವಿಭಿನ್ನ ಜಾತಿಗಳ ನಡುವೆ ಅಂತಹ ವ್ಯತ್ಯಾಸಗಳು ಸಾಂಸ್ಕೃತಿಕ ವಿಷಯಗಳಲ್ಲಿ ಮಾತ್ರ ಇರಲಿಲ್ಲ; ಸೈದ್ಧಾಂತಿಕವಾಗಿಯೂ ಸಹ ಅಂತಹ ನಡವಳಿಕೆಗಳಿಗೆ ವಿಭಿನ್ನವಾದ ಮಾನದಂಡವನ್ನು ಎತ್ತಿ ಹಿಡಿಯಲಾಗಿತ್ತು. ಹಾಗಾಗಿ, ಪೂನಾದಲ್ಲಿನ ಬ್ರಾಹ್ಮಣ ಸರ್ಕಾರವು ಮದ್ಯದ ಉತ್ಪಾದನೆ ಮತ್ತು ಮಾರಾಟವನ್ನು ನಿಷೇಧಿಸುವ ಕೆಲವು ಶಾಸನಗಳಿಂದ ಬಂಡಾರಿಗಳು, ಕೋಲಿಗಳು ಮತ್ತು ಅಂತಹುದೆ ಇತರ ಜಾತಿಗಳನ್ನು ಅದರ ವ್ಯಾಪ್ತಿಯಿಂದ ಹೊರಗಿಟ್ಟಿತು, ಮತ್ತು 'ಬ್ರಾಹ್ಮಣರು, ಶೆನ್ವಿಗಳು, ಪರ್ಬುಗಳು ಮತ್ತು ಸರಕಾರಿ ಅಧಿಕಾರಿಗಳಿಗೆ ಮದ್ಯಪಾನ ಮಾಡದಂತೆ ಕಟ್ಟುನಿಟ್ಟಾಗಿ ತಿಳಿಸಲಾಯಿತು' . ನೈತಿಕ ಮತ್ತು ಆಚರಣೆಗಳಲ್ಲಿ ಈ ವ್ಯತ್ಯಾಸಗಳು ಎದ್ದು ಕಾಣುತ್ತಿದ್ದುದರಿಂದ ಪ್ರಾರಂಭದ ಹಂತದ ಬ್ರಿಟಿಷ್ ನ್ಯಾಯಾಲಯವು ಅವುಗಳ ವಾಸ್ತವ ಆಚರಣೆಗಳ ಬಗ್ಗೆ ಅವರ ಪಂಡಿತರುಗಳನ್ನು ಮಾತ್ರವಲ್ಲದೆ ಆಯಾ ಜಾತಿಯ ಮುಖ್ಯಸ್ಥರ ಸಾಕ್ಷಿಯನ್ನು ಆಧರಿಸಿ ಖಾತ್ರಿಪಡಿಸಿಕೊಳ್ಳುತ್ತಿದ್ದವು. ಸರ್ಕಾರದ ಆದೇಶದ ಮೇರೆಗೆ ಸ್ಟೀಲೆಯು ಹಿಂದೂ ಜಾತಿಗಳ ಕಾನೂನು ಮತ್ತು ಆಚರಣೆಗಳ ಸಂಗ್ರಹವನ್ನು ಮಾಡಿದ್ದರ ಉದ್ದೇಶ ವೈವಿಧ್ಯಮಯ ರೂಢಿ ಆಚರಣೆಗಳನ್ನು ನ್ಯಾಯಾಲಯಗಳಿಗೆ ಖಾತ್ರಿಪಡಿಸಿಕೊಡುವುದೇ ಆಗಿತ್ತು. ಸತ್ತವರನ್ನು ಧಫನು ಮಾಡುವ ಯಾವುದೇ ನಿರ್ದಿಷ್ಟವಾದ ಪದ್ಧತಿ

ಹಿಂದೂಗಳಲ್ಲಿರಲಿಲ್ಲ. ಯಾವುದೇ ಒಬ್ಬ ವ್ಯಕ್ತಿಯು ಸತ್ತಾಗ ಅವನ ಜಾತಿಯರು ಬಂದು ಹೆಣವನ್ನು ತೆಗೆದುಕೊಂಡು ಹೋಗಿ ಸಮಾಧಿ ಮಾಡಬೇಕಿತ್ತು. ವಿವಾಹದ ಸಂದರ್ಭದಲ್ಲಿ ಆ ಹಳ್ಳಿ ಅಥವಾ ಪಟ್ಟಣದಲ್ಲಿದ್ದ ಅವರದೇ ಜಾತಿಯವರಿಗೆ ಹಬ್ಬದೂಟವನ್ನು ಏರ್ಪಡಿಸಬೇಕಿತ್ತು. ಅಂತಹ ಊಟದ ತಯಾರಿಯಲ್ಲಿ ಮತ್ತು ವಿವಾಹ ಸಮಾರಂಭದ ಇತರ ತಯಾರಿಗಳಿಗೆ ಸಂಬಂಧಿಸಿದಂತೆ ಮತ್ತೆ ಅದೇ ಜಾತಿಯವರು ಬರಬೇಕಾಗಿತ್ತು. ಇಂತಹ ಮತ್ತು ದಿನನಿತ್ಯದ ಇದೇ ತರಹದ ವ್ಯವಹಾರಗಳಿಗೆ ಅವರ ಜಾತಿಯವರದೇ ಸಹಕಾರ ಅಗತ್ಯವಾಗಿರುತ್ತಿತ್ತು. ಆದ್ದರಿಂದ ಜಾತಿಗಳು ಒಂದೇ ಸಮಾಜದಲ್ಲಿ ಅಸ್ತಿತ್ವವನ್ನು ಹೊಂದಿದ್ದವಾದರೂ, ಪರಸ್ಪರ ವಿಭಿನ್ನವಾಗಿದ್ದು, ತಮ್ಮಷ್ಟಕ್ಕೆ ಚಿಕ್ಕ ಮತ್ತು ಸಂಪೂರ್ಣವಾದ ಸಮಾಜವಾಗಿದ್ದವು.

( ಬ ) ಶ್ರೇಣೀಕರಣ : ಇದುವರೆಗೆ ನಾನು ಚರ್ಚಿಸಿದ ವಿಷಯದಲ್ಲಿ ವಿಭಿನ್ನ ಜಾತಿಗಳ ಸ್ಥಾನಮಾನದ ನಡುವಿನ ವ್ಯತ್ಯಾಸಕ್ಕೆ ಸಂಬಂಧಿಸಿದಂತೆ ತುಲನಾತ್ಮಕ ಪ್ರಮಾಣವನ್ನು ಉಪಯೋಗಿಸಿದೆನು, ಮತ್ತು ಹಾಗೆ ಮಾಡುವಲ್ಲಿ ಜಾತಿ ಸಮಾಜದ ಮತ್ತೊಂದು ಪ್ರಧಾನ ಲಕ್ಷಣವನ್ನು ಈ ಮೊದಲೇ ಊಹಿಸಲಾಗಿದೆ, ಅದೇ, ಗುಂಪುಗಳ ಶ್ರೇಣೀಕರಣ. ಭಾರತದ ಎಲ್ಲೆಡೆಯಲ್ಲೂ ಬ್ರಾಹ್ಮಣರು ತುತ್ತತುದಿಯಲ್ಲಿರುವ ಜಾತಿಗಳ ಆದ್ಯತೆಯ ಬಗ್ಗೆ ಒಂದು ನಿಶ್ಚಿತವಾದ ಯೋಜನೆ ಇದೆ. ದಕ್ಷಿಣ ಭಾರತದಲ್ಲಿ ಮಾತ್ರ ಕುಶಲಕರ್ಮಿಗಳು "ಸಾಮಾಜಿಕ ಶ್ರೇಣಿಯಲ್ಲಿ ಬ್ರಾಹ್ಮಣರು ತಮಗೆ ಒದಗಿಸಿದ ಸ್ಥಾನಕ್ಕಿಂತ ಎತ್ತರದ ಸ್ಥಾನಕ್ಕಾಗಿ ಸಂಘರ್ಷ ನಡೆಸಿದ್ದಾರೆ ....ಈ ಶ್ರೇಷ್ಟ ಜಾತಿಯ (ಕಮ್ಮಾಲನ್)ಸದಸ್ಯರು ಬ್ರಾಹ್ಮಣರ ಶ್ರೇಷ್ಟತೆಯನ್ನು ಪ್ರಶ್ನಿಸುತ್ತಾರೆ ಮತ್ತು ತಾವೂ ಸಹ ಅವರಿಗೆ ಸಮನಾದ ಸ್ಥಾನಮಾನವನ್ನು ಹೊಂದಿದ್ದೇವೆ ಎಂದು ಪ್ರತಿಪಾದಿಸುತ್ತಾರೆ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ." 1760ರಲ್ಲಿ ಭಾರತಕ್ಕೆ ಭೇಟಿಕೊಟ್ಟ ಜಾನ್ ಫ್ರೇಯರ್ ಇಂತಹ ಧೋರಣೆಯನ್ನು ಉಲ್ಲೇಖಿಸುವಂತೆ ಕಾಣಿಸುತ್ತದೆ. ಭಾರತದ ಯಾವುದೇ ಒಂದು ಭಾಷಾವಾರು ಪ್ರಾಂತ್ಯದಲ್ಲಿ ವರ್ಗದ ನೆಲೆಯಲ್ಲಿ ಗುಂಪುಗಳಾಗಿ ವಿಂಗಡಿಸಲಾದ ಮತ್ತು ಅವುಗಳ ಶ್ರೇಣೀಕರಣವನ್ನು ಹೆಚ್ಚು ಕಡಿಮೆ ಎಲ್ಲರೂ ಒಪ್ಪಿಕೊಂಡಿದ್ದ ಇನ್ನೂರರಷ್ಟು ಜಾತಿಗಳಿರುತ್ತವೆ. ಆದರೆ ಯಾವುದೇ ವರ್ಗದ ಪ್ರತ್ಯೇಕ ಜಾತಿಗಳಲ್ಲಿರುವ ಸಾಮಾಜಿಕ ಪ್ರಾಶಸ್ತ್ಯದ ಕ್ರಮವನ್ನು ಖಚಿತವಾಗಿ ಹೇಳಲಾಗದು, ಏಕೆಂದರೆ, ಅಂತಹ ಶ್ರೇಣೀಕರಣದ ಬಗ್ಗೆ ನಿಸ್ಸಂದೇಹವಾದ ಸಹಮತವಿಲ್ಲ. ಅಲ್ಲದೇ, ಈ ವಿಷಯದ ಬಗ್ಗೆ ಜನರ ಚಿಂತನೆಗಳು ಮಸುಕಾಗಿವೆ ಮತ್ತು ಅಸ್ಪಷ್ಟವಾಗಿವೆ. ಕೆಳಗಿನ ಅವಲೋಕನಗಳು ಈ ಪರಿಸ್ಥಿತಿಯನ್ನು ಸ್ಪಷ್ಟವಾಗಿ ವಿವರಿಸುತ್ತವೆ. "ಸಮಾಜದಲ್ಲಿ ಈಗಿರುವ ಹಾಗೆ .... ಪ್ರತಿಯೊಂದು ಸಮುದಾಯಕ್ಕೆ ನಿಗದಿಪಡಿಸಿರುವ ಸ್ಥಾನವನ್ನು ಸುಲಭವಾಗಿ ಪ್ರತ್ಯೇಕಿಸಿ ನೊಡಲಾಗುವುದಿಲ್ಲ, ಹಾಗೆಯೆ, ಜಾತಿಗಳನ್ನು ಕ್ರಮವಾಗಿ ಜೋಡಿಸುವ ಜನರೇ ಸ್ವತಃ ಗುರುತಿಸಿರುವ ಮತ್ತು ಎಲ್ಲರಿಗೂ ಅನ್ವಯವಾಗುವ ಪ್ರಾಶಸ್ತ್ಯದ ತತ್ವಗಳೂ ಇಲ್ಲ. ಒಂದು ತುದಿಯಲ್ಲಿ ಬ್ರಾಹ್ಮಣರು ಮತ್ತು ಮತ್ತೊಂದು ತುದಿಯಲ್ಲಿದ್ದ ಕೆಳಹಂತಕ್ಕೆ ತಳ್ಳಲ್ಪಟ್ಟಿದ್ದ ಹೊಲೆಯರಂತಹ ಜಾತಿಗಳನ್ನು ಹೊರತುಪಡಿಸಿ ಮಧ್ಯಮ ವರ್ಗಗಳಲ್ಲಿದ್ದ ಸಾಕಷ್ಟು ಸಂಖ್ಯೆಯ ಜಾತಿಗಳು ಅವರ ಜಾತಿಯು ಪಕ್ಕದಲ್ಲಿದ್ದ ಮತ್ತೊಂದು ಜಾತಿಯವರಿಗಿಂತ ನಮ್ಮ ಜಾತಿಯು ಉತ್ತಮ ಮತ್ತು ಹಾಗೆಯೆ ಅದನ್ನು ಶ್ರೇಣೀಕರಿಸಬೇಕೆಂದು ಚಿಂತಿಸಿದರು ಮತ್ತು ಪ್ರಚಾರ ಮಾಡಿದರು." ಬಿಹಾರದಲ್ಲಿರುವ ಶೂದ್ರರು ಸಾಮಾನ್ಯವಾಗಿ ನಾಲ್ಕು ವರ್ಗಗಳಾಗಿ ವಿಂಗಡಿಸಲ್ಪಟ್ಟಿದ್ದಾರೆ ಎಂದು ಹೇಳಿದ ಮಾರ್ಟಿನ್ ಮುಂದವರೆದು ಹೀಗೆನ್ನುತ್ತಾರೆ: "ಈ ವಿವರಣೆಯನ್ನು ತಯಾರಿಸುವಲ್ಲಿ ನನಗೆ ಸಹಾಯ ಮಾಡಿದ ಜನರು ಪ್ರತಿಯೊಂದು ಜಾತಿಯು ಯಾವ ವರ್ಗಕ್ಕೆ ಸೇರಿದ್ದಾವೆನ್ನುವುದನ್ನು ಸ್ಪಷ್ಟವಾಗಿ ತಿಳಿಸಲು ವಿಫಲರಾದರು; ಏಕೆಂದರೆ, ಅಂತಹ ಕೆಳ ಜಾತಿಗಳ ವಿವಿಧ ಹಕ್ಕೊತ್ತಾಯಗಳನ್ನು ಗಮನಿಸುವ ಗೋಜಿಗೆ ಅವರು ಹೋಗಿರಲಿಲ್ಲ."

( ಇ ) ಆಹಾರ ಸೇವನೆ ಮತ್ತು ಸಾಮಾಜಿಕ ಒಡನಾಟಗಳ ಮೇಲಿನ ನಿರ್ಬಂಧ : ಎಂತಹ ಆಹಾರ ಅಥವಾ ಪಾನೀಯಗಳನ್ನು ಯಾರು ಯಾವ ಜಾತಿಯಿಂದ ತೆಗೆದುಕೊಳ್ಳಬಹುದು ಎನ್ನುವ ಬಗ್ಗೆ ಕೂಲಂಕಷವಾದ ನಿಯಮಗಳಿವೆ. ಆದರೆ ಈ ವಿಷಯಕ್ಕೆ ಸಂಬಂಧಿಸಿದಂತೆ ಬಹಳಷ್ಟು ವೈವಿಧ್ಯಗಳಿವೆ. ಆಹಾರ ಸೇವನೆ ಮತ್ತು ಸಾಮಾಜಿಕ ಒಡನಾಟಗಳ ವಾಡಿಕೆಗಳು ಭಾರತವನ್ನು ವಿಶಾಲವಾಗಿ ಎರಡು ಭಾಗವಾಗಿ ವಿಂಗಡಿಸುತ್ತವೆ. ಹಿಂದೂಸ್ಥಾನ ಪ್ರಾಂತ್ಯದೊಳಗೆ ಜಾತಿಗಳನ್ನು ಐದು ಗುಂಪುಗಳಾಗಿ ವಿಭಜಿಸಬಹುದು; ಮೊದಲನೆಯದಾಗಿ ದ್ವಿಜ ಜಾತಿಗಳು; ಎರಡು, ಯಾರ ಕೈಯಿಂದ ದ್ವಿಜರು ಪಕ್ಕಾ ಆಹಾರವನ್ನು ತೆಗೆದುಕೊಳ್ಳಬಹುದೋ ಆ ಜಾತಿಗಳು; ಮೂರು, ದ್ವಿಜರು ನೀರನ್ನು ಹೊರತಾಗಿ ಯಾವುದೇ ಆಹಾರವನ್ನು ಅವರ ಕೈಯಿಂದ ತೆಗೆದುಕೊಳ್ಳುವುದಿಲ್ಲವೋ ಅಂತಹ ಜಾತಿಗಳು; ನಾಲ್ಕು, ಅಸ್ಪೃಶ್ಯರಲ್ಲವಾದರೂ ಯಾರ ಕೈಯಿಂದ ದ್ವಿಜರು ನೀರನ್ನೂ ತೆಗೆದುಕೊಳ್ಳುವುದಿಲ್ಲವೋ ಅಂತಹ ಜಾತಿಗಳು; ಕೊನೆಯದಾಗಿ, ಕೇವಲ ದ್ವಿಜರಲ್ಲದೆ ಸಾಂಪ್ರದಾಯಿಕ ಹಿಂದೂಗಳೂ ಕೂಡ ಯಾರ ಸ್ಪರ್ಶ ಮಾತ್ರದಿಂದಲೇ ಅಪವಿತ್ರಗೊಳ್ಳುವರೋ ಅಂತಹ ಅಸ್ಪೃಶ್ಯ ಜಾತಿಗಳು. ಎಲ್ಲ ಆಹಾರಗಳನ್ನು ಎರಡು ವರ್ಗವಾಗಿ ವಿಂಗಡಿಸಲಾಗಿದೆ. 'ಕಚ್ಚಾ' ಮತ್ತು 'ಪಕ್ಕಾ' ನೀರಿನಿಂದ ಬೇಯಿಸಿದ ಯಾವುದೇ ಆಹಾರವು ಮೊದಲನೆಯ ಗುಂಪಿಗೆ ಸೇರುತ್ತದೆ, ಮತ್ತು ನೀರನ್ನು ಬೆರಸದೆ 'ತುಪ್ಪ' ದಿಂದ ಮಾತ್ರ ಬೇಯಿಸಿದ್ದು ಪಕ್ಕಾ ಆಹಾರವೆನಿಸಿಕೊಳ್ಳುತ್ತದೆ. "ಒಬ್ಬ ವ್ಯಕ್ತಿಯು ತನ್ನ ಜಾತಿಯವರಿಂದ ತಯಾರಾದ ಹೊರತು 'ಕಚ್ಚಾ' ಆಹಾರವನ್ನು ಸ್ವೀಕರಿಸಬಾರದು ಎನ್ನುವುದು ಒಂದು ನಿಯಮವಾಗಿದೆ, ವಾಸ್ತವದ ಆಚರಣೆಯಲ್ಲಿ ಇದು, ಅದು ಜಾತಿಯೇ ಇರಲಿ ಅಥವಾ ಉಪಜಾತಿಯೆ ಇರಲಿ, ತನ್ನದೇ ಆದ ವೈವಾಹಿಕವೈವಾಹಿಕ ಸಂಬಂಧವೇರ್ಪಡಬಹುದಾದ ಗುಂಪಿನ ಅಥವಾ ತನ್ನ ಬ್ರಾಹ್ಮಣ 'ಗುರು' ಅಥವಾ ಆಧ್ಯಾತ್ಮಿಕ ಮಾರ್ಗದರ್ಶಿಯಿಂದ ಎನ್ನುವ ಅರ್ಥವನ್ನು ಹೊಂದಿದೆ." ಆದರೆ ಆಚರಣೆಯಲ್ಲಿ ಬ್ರಾಹ್ಮಣರಿಂದ 'ಕಚ್ಚಾ' ಆಹಾರವನ್ನು ತೆಗೆದುಕೊಳ್ಳಲು ಬೇರಾವುದೇ ಜಾತಿಯವರಿಗೆ ಯಾವ ಆಕ್ಷೇಪಣೆಯೂ ಇರಲಿಲ್ಲ. ಒಬ್ಬ ಬ್ರಾಹ್ಮಣ ಇತರ ಯಾವುದೇ ಜಾತಿಯಿಂದ 'ಕಚ್ಚಾ' ಆಹಾರವನ್ನು ತೆಗೆದುಕೊಳ್ಳುವಂತಿರಲಿಲ್ಲ; ಕನೌಜಿಯಾ ಬ್ರಾಹ್ಮಣರಂತಹ ಕೆಲವು ಬ್ರಾಹ್ಮಣರು ಇದರ ಬಗ್ಗೆ ಎಷ್ಟು ಕಟ್ಟುನಿಟ್ಟಿನವರಾಗಿದ್ದರೆಂದರೆ ಅವರ ಕುರಿತು 'ಮೂವರು ಕನೌಜಿಯಾರಿಗೆ ಹದಿಮೂರು ಒಲೆಗಳು ಬೇಕು' ಎನ್ನುವ ಗಾದೆಯು ಪ್ರಚಲಿತದಲ್ಲಿದೆ. 'ಪಕ್ಕಾ ' ಆಹಾರಕ್ಕೆ ಸಂಬಂಧಿಸಿದಂತೆ ಇದನ್ನು ಬ್ರಾಹ್ಮಣರು ಕೆಲವೇ ಜಾತಿಗಳಿಂದ ಮಾತ್ರ ತೆಗೆದುಕೊಳ್ಳಬಹುದಾಗಿತ್ತು. ಇ.ಎ. ಬ್ಲಂಟ್ ಹೇಳುವ ಹಾಗೆ "ಜಾತಿಯ ಸಾಮಾಜಿಕ ಸ್ಥಾನಮಾನ ಮತ್ತು ಅಡುಗೆಗೆ ಸಂಬಂಧಿಸಿದಂತೆ ಇದ್ದ ನಿಷೇಧಗಳ ನಡುವೆ ಯಾವುದೇ ನೇರವಾದ ಸಂಬಂಧವಿರಲಿಲ್ಲ' ; ಉತ್ತರ ಪ್ರದೇಶದಲ್ಲಿರುವ ಎಪ್ಪತ್ತಾರು ಜಾತಿಗಳಲ್ಲಿ ಮುವತ್ತಾರು ಜಾತಿಗಳು ಬೇಯಿಸಿದ 'ಕಚ್ಚಾ' ಆಹಾರವನ್ನು ತಮ್ಮ ಜಾತಿಯವರಿಂದ ಮಾತ್ರ ತೆಗೆದುಕೊಳ್ಳುತ್ತಾರೆ ಬೇರೆಯವರಿಂದಲ್ಲ.

ಕೆಲವು ಜಾತಿಗಳು ಅವರ ಸ್ಪರ್ಶದಿಂದಲೇ ಅಪವಿತ್ರಗೊಳಿಸುತ್ತಾರೆ ಎನ್ನುವ ಚಿಂತನೆಯು ಉತ್ತರ ಭಾರತಕ್ಕಿಂತ ದಕ್ಷಿಣದಲ್ಲಿ ಹೆಚ್ಚಾಗಿದೆ. ಒಬ್ಬ ಅಸ್ಪೃಶ್ಯನ ನೆರಳಿನಿಂದಲೆ ಅಥವಾ ಹೋಗುವ ದಾರಿಯಲ್ಲಿ ಅವನು ಎದುರಾದರೆ ಅಪವಿತ್ರತೆಯು ಪಸರಿಸುತ್ತದೆ ಎನ್ನುವ ಚಿಂತನೆಯು ಹಿಂದೂಸ್ಥಾನದಲ್ಲಿಲ್ಲ. ಒಬ್ಬ ಕುಲೀನ ಜಾತಿಯ ಯಾವುದೇ ಹಿಂದೂ ಸಹ ಚಮ್ಮಾರ ಅಥವಾ ಡೊಮ್ ಜಾತಿಯವನನ್ನು ಮುಟ್ಟುವುದಿಲ್ಲ; ಮತ್ತು ಕೆಲವು ಕೆಳಗಿನ ಜಾತಿಯವರೆ ಸ್ವತಃ ಇಂತಹ ಸಂಪರ್ಕದ ಬಗ್ಗೆ ಕಟ್ಟುನಿಟ್ಟಿನಿಂದಿರುತ್ತಾರೆ. ಹಾಗಾಗಿ "ತಾವೆ ಸ್ವತಃ ಡೊಮ್ ಜಾತಿಯ ಶಾಖೆಗಳಾದ ಬಾನ್ಸ್ಫರ್ ಮತ್ತು ಬಾಸೊರ್ ಜಾತಿಯವರು

ಡೊಮ್‌ರನ್ನಾಗಲಿ, ದೋಬಿಯವರನ್ನಾಗಲಿ ಮುಟ್ಟುವುದಿಲ್ಲ, ಧಿಡೀರ್ ಮೇಲೇರಿದವರ ಎಲ್ಲ ಅಸಹಿಷ್ಣುತೆಯೊಂದಿಗೆ ಬಾಸೊರ್ ಜನರು ಮುಸಹರ್, ಚಾಮರ್, ಧಾರ್ಕರ್ ಮತ್ತು ಭಾಂಗಿ ಜಾತಿಯವರ ಬಗ್ಗೆ ಆಕ್ಷೇಪಣೆಯನ್ನು ವ್ಯಕ್ತಪಡಿಸುತ್ತಾರೆ."

ಬಂಗಾಳದಲ್ಲಿ ಜಾತಿಗಳನ್ನು ಎರಡು ಮುಖ್ಯ ಭಾಗಗಳಾಗಿ ವಿಂಗಡಿಸಲಾಗಿದೆ: (1) ಬ್ರಾಹ್ಮಣರು, ಮತ್ತು (2) ಶೂದ್ರರು. ಎರಡನೆ ವರ್ಗವನ್ನು ಆಹಾರ ಮತ್ತು ನೀರಿಗೆ ಸಂಬಂಧಿಸಿದಂತೆ ಅವುಗಳ ಸ್ಥಾನಮಾನವನ್ನು ಸೂಚಿಸುವ ಮತ್ತೆ ನಾಲ್ಕು ಉಪವರ್ಗಗಳಾಗಿ ವಿಭಜಿಸಲಾಗಿದೆ: (ಅ) ಸತ್-ಶೂದ್ರ ಗುಂಪು ಕಾಯಸ್ಥ ಮತ್ತು ನವಶಾಖಾಗಳನ್ನು ಒಳಗೊಂಡಿದೆ; (ಆ) ನಂತರ ಬರುವವರು ಜಲಾಚರಣೀಯ ಶೂದ್ರರು – "ತಾಂತ್ರಿಕವಾಗಿ ನವಶಾಖಾ ಗುಂಪಿಗೆ ಸೇರದ, ಮತ್ತು ಅವರಿಂದ ಬ್ರಾಹ್ಮಣರು ಹಾಗೂ ಇತರ ಮೇಲ್ಜಾತಿಯವರು ನೀರನ್ನು ತೆಗೆದುಕೊಳ್ಳಬಹುದಾದ ಜಾತಿಗಳು" ; (ಇ) ನಂತರ ಜಲಾವ್ಯವಹಾರ್ಯ – ಶೂದ್ರರು ಬರುತ್ತಾರೆ, ಬ್ರಾಹ್ಮಣರು ಈ ಜಾತಿಗಳಿಂದ ನೀರನ್ನು ಸ್ವೀಕರಿಸುವುದಿಲ್ಲ; (ಈ) ಅಂತಿಮವಾಗಿ ಅಸ್ಪೃಶ್ಯ ಶೂದ್ರರು ಬರುತ್ತಾರೆ – ಇವರ ಸ್ಪರ್ಶವು ಎಷ್ಟು ಅಪವಿತ್ರವೆಂದರೆ ಅದು ಗಂಗಾ ನೀರನ್ನೇ ಅಶುದ್ಧಗೊಳಿಸುತ್ತದೆ ಹೀಗಾಗಿ ಅವರ ಸಂಪರ್ಕವನ್ನು ಇತರರು ತಪ್ಪಿಸಿಕೊಳ್ಳಬೇಕು. ಹಾಗಾಗಿ ಅವರು ಅಸ್ಪಶ್ಯರಾಗಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಕೆಲವು ಜನರು ಬ್ರಾಹ್ಮಣರಿಂದಲೂ 'ಕಚ್ಚಾ' ಆಹಾರವನ್ನು ಸ್ವೀಕರಿಸುವುದಿಲ್ಲ ಎನ್ನುವುದನ್ನು ಬಿಟ್ಟರೆ ಪಶ್ಚಿಮ ಬಂಗಾಳವು ಹಿಂದೂಸ್ಥಾನವನ್ನೇ ಹೋಲುತ್ತದೆ. 'ಪಕ್ಕಾ' ಆಹಾರವನ್ನು ತಮ್ಮದೇ ಜಾತಿಯವರಿಂದ ಮಾತ್ರವಲ್ಲದೆ ಮೈರಾಸ್ ಮತ್ತು ಹಲ್ವಾಯಿಸ್‌ಗಳಂತಹ ಮಿಠಾಯಿ ಉತ್ಪಾದಕ ವರ್ಗಗಳಿಂದಲೂ ತೆಗೆದುಕೊಳ್ಳಬಹುದು. ಈ ಕೆಳಗಿನ ಅವಲೋಕನವು ಅಸ್ಪೃಶ್ಯರ ಪರಿಸ್ಥಿತಿಯ ಬಗ್ಗೆ ಸ್ಪಷ್ಟವಾಗಿ ತಿಳಿಸುತ್ತದೆ. "ಕೆಳಗಿನ ಜಾತಿಯ ವ್ಯಕ್ತಿಯು ನೀರು ಸೇದಿದರೆ ಬಾವಿಯೂ ಸಹ ಅಶುದ್ಧವಾಗುತ್ತದೆ, ಆದರೆ ಯಾವ ಪಾತ್ರೆ ಮತ್ತು ಬಾವಿಯಿಂದ ನೀರನ್ನು ತೆಗೆದುಕೊಳ್ಳಲಾಗಿದೆ ಎನ್ನುವುದೂ ಸಹ ನಿರ್ಣಾಯಕವಾಗಿರುತ್ತದೆ. ಕೈಯಿಂದ ತೋಡಿದ ಬಾವಿಗಳು ಕೊಳವೆಗಳ ಮೂಲಕ ಮಾಡಿದ ಬಾವಿಗಳಂತೆ ಅಶುದ್ಧವಾಗುವುದಿಲ್ಲ, ಮತ್ತು ಅದರೊಳಗೆ ಒಂದು ಹಸುವು ನಿಂತು ಸುತ್ತ ತಿರುಗುವಷ್ಟು ಅಗಲವಾಗಿದ್ದರೆ ಅತ್ಯಂತ ಕೆಳಗಿನ ಜಾತಿಯ ಜನರು ಉಪಯೋಗಿಸಿದರೂ ಅದು ಅಶುದ್ಧವಾಗುವುದಿಲ್ಲ ...." ಕೆಲವು ನಿರ್ದಿಷ್ಟ ಜಾತಿಗಳನ್ನು ಎಷ್ಟು ಹೀನವಾಗಿ ಕಾಣಲಾಗುತ್ತದೆಯೆಂದರೆ ಅವರು ಪ್ರಧಾನ ದೇವಸ್ಥಾನಗಳ ಅಂಗಳವನ್ನೂ ಪ್ರವೇಶಿಸುವಂತಿಲ್ಲ. ಅಂತಹ ಜಾತಿಗಳು ಗ್ರಾಮದ ಹೊರಭಾಗದಲ್ಲಿ ಜೀವಿಸಬೇಕಾಗುತ್ತದೆ.

ಪೂರ್ವ ಮತ್ತು ದಕ್ಷಿಣ ಬಂಗಾಳದಲ್ಲಿ ಮತ್ತು ಗುಜರಾತಿನಲ್ಲಿ ಮತ್ತು ಸಮಗ್ರ ದಕ್ಷಿಣ ಭಾರತದಲ್ಲಿ ತಮ್ಮ ಜಾತಿಯವರನ್ನು ಹೊರತುಪಡಿಸಿ ಬೇರೆಯವರಿಂದ ಆಹಾರವನ್ನು ಸ್ವೀಕರಿಸಲು' ಕಚ್ಚಾ' ಆಹಾರವೆನ್ನುವ ವ್ಯತ್ಯಾಸವನ್ನು ಕಾಣುವುದಿಲ್ಲ. ಗುಜರಾತಿನಲ್ಲಿ ಮತ್ತು ದಕ್ಷಿಣ ಭಾರತದಲ್ಲಿ ಸಾಮಾನ್ಯವಾಗಿ ಹೇಳುವುದಾದರೆ, ಒಬ್ಬ ಬ್ರಾಹ್ಮಣನು ತನ್ನ ಜಾತಿಯನ್ನು ಹೊರತುಪಡಿಸಿ ಬೇಯಿಸಿದ ಆಹಾರ ಹೋಗಲಿ ನೀರನ್ನೂ ಸಹ ತೆಗೆದುಕೊಳ್ಳುವುದಿಲ್ಲ. ಉಳಿದ ಎಲ್ಲ ಜಾತಿಗಳು, ಗುಂಪುಗಳು ಹೆಚ್ಚು ಕಡಿಮೆ, ತಮ್ಮ ಜಾತಿಗಿಂತ ಕೆಳ ಜಾತಿಯವರಿಂದ ಯಾವುದೇ ಬೇಯಿಸಿದ ಆಹಾರವನ್ನು ಸ್ವೀಕರಿಸದ ಅದೇ ತತ್ವವನ್ನು ಅನುಸರಿಸುತ್ತಾರೆ. ಈ ನಿಯಮವು ಅಷ್ಟೇ ಕಠಿಣವಾಗಿ ನೀರನ್ನು ತೆಗೆದುಕೊಳ್ಳುವುದಕ್ಕೆ ಅನ್ವಯಿಸುವುದಿಲ್ಲ. ಅದೇ ರೀತಿ ಒಂದು ಕೆಳ ಜಾತಿಯು ತನ್ನ ಮೇಲಿನ ಜಾತಿಯಿಂದ ಬೇಯಿಸಿದ ಆಹಾರವನ್ನು ಸ್ವೀಕರಿಸಲು ಯಾವುದೇ ಅಡ್ಡಿಯಿರುವುದಿಲ್ಲ

ಎನ್ನುವುದೂ ಒಂದು ನಿಯಮವಾಗಿ ಆಚರಣೆಯಲ್ಲಿದೆ. ಹಾಗಾಗಿ ಎಲ್ಲ ಜಾತಿಯವರು ಬ್ರಾಹ್ಮಣರಿಂದ ಬೇಯಿಸಿದ ಆಹಾರವನ್ನು ಸ್ವೀಕರಿಸುತ್ತಾರೆ.

ಕೆಲವು ಜಾತಿಗಳಿಂದ ಅಶುದ್ಧತೆಯು ಅದರ ಮೇಲಿನ ಜಾತಿಯ ಸದಸ್ಯರಿಗೆ ಹರಡುವಿಕೆಯು ಗುಜರಾತಿನಲ್ಲಿ ಹೆಚ್ಚು ಮುಂದುವರೆದಿದೆ. ಸೈದ್ಧಾಂತಿಕವಾಗಿ, ತನ್ನ ಜಾತಿಗಿಂತ ಯಾವುದೇ ಕೆಳಗಿನ ಜಾತಿಯವನ ಸ್ಪರ್ಶವು ಮೇಲ್ಜಾತಿಯವನನ್ನು ಮಲಿನಗೊಳಿಸುತ್ತದೆ; ಆದರೆ ವಾಸ್ತವದಲ್ಲಿ ಈ ನಿಯಮವನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗುವುದಿಲ್ಲ. ಮರಾಠ ದೇಶದಲ್ಲಿ ಅಸ್ಪೃಶ್ಯನ ನೆರಳು ಮೇಲ್ಜಾತಿಯವನ ಮೇಲೆ ಬಿದ್ದರೆ ಅವನನ್ನು ಅಶುದ್ಧಗೊಳಿಸಲು ಅದಷ್ಟೇ ಸಾಕು. ಮದ್ರಾಸಿನಲ್ಲಿ, ಅದರಲ್ಲೂ ವಿಶೇಷವಾಗಿ ಮಲಬಾರಿನಲ್ಲಿ, ಈ ಡಾಕ್ಟ್ರಿನ್‌ನ್ನು ಮತ್ತಷ್ಟು ವಿಸ್ತೃತಗೊಳಿಸಲಾಗಿದೆ, ಅದರಿಂದಾಗಿ ಕೆಲವು ನಿರ್ದಿಷ್ಟ ಜಾತಿಗಳು ಬ್ರಾಹ್ಮಣರು ಮತ್ತು ಮೇಲ್ಜಾತಿಯವರನ್ನು ಮಲಿನಗೊಳಿಸಬಾರದೆಂದರೆ ಯಾವಾಗಲೂ ತಮ್ಮ ಹಾಗೂ ಅವರ ನಡುವೆ ನಿಗದಿಪಡಿಸಿದಷ್ಟು ದೂರವನ್ನು ಕಾಪಾಡಿಕೊಂಡು ಬರಬೇಕಾಗುತ್ತದೆ. ಹಾಗಾಗಿ, ತಮಿಳುನಾಡಿನ ಭಟ್ಟಿ ಇಳಿಸುವ ಜಾತಿಯವರಾದ ಶಾಣಾರರು ಬ್ರಾಹ್ಮಣನಿಂದ ಇಪ್ಪತ್ನಾಲ್ಕು ಹೆಜ್ಜೆಯೊಳಗಿನ ಅಂತರದಲ್ಲಿ ನಿಂತರೆ ಅವನನ್ನು ಮಲಿನಗೊಳಿಸುತ್ತಾನೆ. ಕೇರಳದ ಜನರಲ್ಲಿ ಒಬ್ಬ ನಾಯರ್ ನಂಬೂದರಿ ಬ್ರಾಹ್ಮಣನ ಹತ್ತಿರ ಬರಬಹುದು ಆದರೆ ಅವನನ್ನು ಮುಟ್ಟುವಂತಿಲ್ಲ; ತಿಯಾನ್ ಒಬ್ಬ ಬ್ರಾಹ್ಮಣನಿಂದ ಮೂವತ್ತಾರು ಹೆಜ್ಜೆ ದೂರ ಇರಬೇಕು, ಮತ್ತು ಪುಲಯನ್ ಅವನಿಂದ ತೊಂಬತ್ತಾರು ಹೆಜ್ಜೆಗಳಿಗಿಂತ ಹತ್ತಿರವಿರಬಾರದು. ಒಬ್ಬ ತಿಯಾನ್ ಒಬ್ಬ ನಾಯರ್‌ನಿಂದ ಹನ್ನೆರಡು ಹೆಜ್ಜೆಗಳಷ್ಟು ದೂರವಿರಬೇಕು, ಕೆಲವು ಜಾತಿಗಳು ತಿಯಾನ್‌ನ ಹತ್ತಿರ ಹೋಗಬಹುದು ಆದರೆ ಅವನನ್ನು ಮುಟ್ಟುವಂತಿಲ್ಲ. ಒಬ್ಬ ಪುಲಯನ್ ಯಾವುದೇ ಹಿಂದೂ ಜಾತಿಯವನ ಹತ್ತಿರ ಹೋಗುವಂತಿಲ್ಲ. ಬ್ರಾಹ್ಮಣರನ್ನು ಹೊರತುಪಡಿಸಿ ಮತ್ತೆಲ್ಲ ಜಾತಿಗಳು ಹೊರಬೇಕಾದ ಈ ಮಲಿನತೆಯ ನಿಯಮಗಳು ಎಷ್ಟು ನಿಷ್ಠುರವಾಗಿದ್ದವೆಂದರೆ ಶೂದ್ರರು ವಾಸಿಸುವ ಸ್ಥಳದ ಹತ್ತಿರದಲ್ಲಿಯೂ ಕೂಡ ಬ್ರಾಹ್ಮಣರು ಸಂಧ್ಯಾವಂದನೆ ಮಾಡುವಂತಿರಲಿಲ್ಲ. ಸಾಮಾನ್ಯವಾಗಿ ದೋಬಿ ಹಾಗೂ ಕ್ಷೌರಿಕ ಮಲಿನವಾದ ಮತ್ತು ಅಸ್ಪೃಶ್ಯ ಜಾತಿಯವರಿಗೆ ತಮ್ಮ ಸೇವೆಯನ್ನು ಒದಗಿಸುತ್ತಿರಲಿಲ್ಲ. "ಒಬ್ಬ ಆಧುನಿಕ ಬ್ರಾಹ್ಮಣ ವೈದ್ಯನೂ ಕೂಡ, ಶೂದ್ರನೊಬ್ಬನ ನಾಡಿಯನ್ನು ನೋಡುವಾಗ ಅವನ ಸ್ಪರ್ಶದಿಂದ ತಾನ ಮಲಿನಗೊಳ್ಳದಿರಲು ಅವನ ಮುಂಗೈಗೆ ಒಂದು ಸಣ್ಣ ರೇಷ್ಮೆ ವಸ್ತ್ರವನ್ನು ಸುತ್ತುತ್ತಿದ್ದನು."

(ಈ) ವಿಭಿನ್ನ ವಿಭಾಗಗಳ ನಾಗರಿಕ ಮತ್ತು ರಿಲಿಜಿಯಸ್ ಅನರ್ಹತೆಗಳು ಮತ್ತು ಸವಲತ್ತುಗಳು : ಒಂದು ಗ್ರಾಮದಲ್ಲಿ ಪ್ರತ್ಯೇಕವಾದ ಜಾತಿಗಳು ಅಥವಾ ಜಾತಿಗಳ ಗುಂಪುಗಳ ವಿಭಜನೆಯ ಇರುವಿಕೆಯು ನಾಗರಿಕ ಅನರ್ಹತೆಗಳು ಮತ್ತು ಸವಲತ್ತುಗಳ ಎದ್ದು ಕಾಣುವಂತಹ ಗುರುತಾಗಿತ್ತು. ಇದು ಭಾರತದಾದ್ಯಂತ ಹೆಚ್ಚು ಕಡಿಮೆ ವ್ಯಾಪಿಸಿತ್ತು. ಸಾಂಪ್ರದಾಯಿಕವಾದ ಶುದ್ಧತೆ ಮತ್ತು ಅಸ್ಪೃಶ್ಯತೆಯ ಅಚರಣೆಯಲ್ಲಿ ಇದ್ದ ಹಾಗೆ ಈ ನಿಯಮಗಳ ಅನಮ್ಯ ಸ್ವರೂಪವು ದಕ್ಷಿಣ ಭಾರತದಲ್ಲಿ ವಿಶಿಷ್ಟವಾಗಿ ಎದ್ದು ಕಾಣುತ್ತದೆ. ಸಾಮಾನ್ಯವಾಗಿ ಉತ್ತರ ಭಾರತದಲ್ಲಿ, ಮರಾಠ ದೇಶದಲ್ಲಿ ಮತ್ತು ಕೆಲವು ವೇಳೆ ತೆಲುಗು ಹಾಗೂ ಕನ್ನಡ ಪ್ರದೇಶಗಳಲ್ಲಿ ಅಶುದ್ಧ ಜಾತಿಗಳನ್ನು ಮಾತ್ರ ಬೇರ್ಪಡಿಸಿ ಊರಿನ ಹೊರಗೆ ವಾಸಿಸುವಂತೆ ಮಾಡಲಾಗಿತ್ತು. ಗುಜರಾತನ್ನು ಹೊರತುಪಡಿಸಿದರೆ ಬೇರೆಲ್ಲೂ ಗ್ರಾಮಗಳಲ್ಲಾಗಲಿ, ಪಟ್ಟಣಗಳಲ್ಲಾಗಲಿ ಇತರ ಗುಂಪುಗಳಿಗೆ ಸೇರಿದ ಜಾತಿಗಳಿಗೆ ಪ್ರತ್ಯೇಕವಾದ ವಾಸಸ್ಥಳವನ್ನು ನಿಗದಿಪಡಿಸರುವಂತೆ ಕಾಣಿಸುವುದಿಲ್ಲ. ತಮಿಳು ಹಾಗೂ ಮಲಯಾಳಂ ಪ್ರದೇಶಗಳಲ್ಲಿ ಬಹಳಷ್ಟು ಸಾರಿ ಪ್ರತ್ಯೇಕ ಜಾತಿಗಳು ವಿಭಿನ್ನ ಜಾಗಗಳಲ್ಲಿ ವಾಸಿಸುತ್ತಿದ್ದವು

ಅಥವಾ ಗ್ರಾಮವನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿತ್ತು: ಪ್ರಬಲ ಜಾತಿ ಅಥವಾ ಬ್ರಾಹ್ಮಣರು ಸ್ಥಳ, ಶೂದ್ರರಿಗೆ ನಿಗದಿಪಡಿಸಿದ ಸ್ಥಳ, ಮತ್ತು ಪಂಚಮರು ಮತ್ತು ಅಸ್ಪೃಶ್ಯರಿಗೆ ಮೀಸಲಾಗಿಟ್ಟ ಸ್ಥಳ. ರಮ್‌ನಡ್ ಜಿಲ್ಲೆಯ ಒಂದು ಹಳ್ಳಿಯಲ್ಲಿ ಪ್ರಮುಖವಾದ ಜಾಗವನ್ನು ನಾಯಕರು ಆಕ್ರಮಿಸಿಕೊಂಡಿದ್ದರೆ, ಕುರಿಕಾಯುವವರು, ಕುಶಲಕೆಲಸಗಾರರು, ಮಡಿವಾಳರು ಮತ್ತು ಕ್ಷೌರಿಕರು ಗ್ರಾಮದ ಈಶಾನ್ಯ ಭಾಗದಲ್ಲಿ ವಾಸಿಸುತ್ತಿದ್ದರು. ಅಸ್ಪೃಶ್ಯರು ವಾಯುವ್ಯ ಮತ್ತು ಆಗ್ನೇಯ ದಿಕ್ಕಿನಲ್ಲಿ ತಮ್ಮ ವಹಿವಾಟು ನಡೆಸುತ್ತಿದ್ದರು. ತಿರುಚನಾಪಳ್ಳಿ ಜಿಲ್ಲೆಯಲ್ಲಿ ಹಳ್ಳಿಯ ಬೀದಿಗಳ ಇಕ್ಕೆಲಗಳಲ್ಲಿ ಮನೆಗಳು ಇದ್ದವು. "ಬ್ರಾಹ್ಮಣ, ಶೂದ್ರ ಮತ್ತು ಪಂಚಮ ವಿಭಾಗಗಳು ಪ್ರತ್ಯೇಕವಾಗಿದ್ದವು ಮತ್ತು ಇವುಗಳ ಕೊನೆಯಲ್ಲಿ ಪಲ್ಲನರು, ಪರಯಾಗಳು, ಚಕ್ಕಿಲಿಯರು ಪ್ರತ್ಯೇಕವಾದ ಬೀದಿಗಳಲ್ಲಿ ವಾಸಿಸುತ್ತಿದ್ದರು." ಮದ್ರಾಸಿನಲ್ಲಿ ಪಲ್ಲಿಗಳು ಅಥವಾ ಕೃಷಿಕರು ಪ್ರತ್ಯೇಕವಾದ ವಿಭಾಗಗಳಲ್ಲಿ ವಾಸಿಸುತ್ತಿದ್ದರು ಅದು "ಪಲ್ಲಿ ತೇರು ಎಂದು ವಿಶಿಷ್ಟವಾಗಿ ಕರೆಯಲ್ಪಡುತ್ತಿತ್ತು." ಕೆಲವೊಮ್ಮೆ ಬಳ್ಳಾರಿ ಜಿಲ್ಲೆಯಲ್ಲಿದ್ದಂತೆ ಕೇವಲ ಅಸ್ಪೃಶ್ಯರಾದ ಮಾದಿಗರನ್ನು ಮಾತ್ರ ಪ್ರತ್ಯೇಕವಾಗಿ ಇಡಲಾಗಿತ್ತು, ಉಳಿದ ಎಲ್ಲ ಜಾತಿಗಳು ಪರಸ್ಪರ ಸಮೀಪದಲ್ಲೇ ವಾಸಿಸುತ್ತಿದ್ದರು. ಮರಾಠ ದೇಶದ ಕೆಲವು ಭಾಗಗಳಲ್ಲಿ ಜಾತಿಗಳಿಗೆ ಮೀಸಲಿದ್ದ ಜಾಗವನ್ನು ಅವುಗಳ ಹೆಸರಿನಿಂದಲೆ ಕರೆಯಲಾಗುತ್ತಿತ್ತು.: ಬ್ರಾಹ್ಮಣರ ಆಲಿ, ಅಥವಾ ವಾಡಾ, ಪ್ರಭು-ಆಲಿ, ಸೋನರರ-ಆಲಿ ಇತ್ಯಾದಿ. ಮಾಂಗ್, ಮಹಾರ್ ಇತ್ಯಾದಿ ಕೆಳಜಾತಿಗಳನ್ನು ಒತ್ತಾಯಪೂರ್ವಕವಾಗಿ ಗ್ರಾಮದ ಹೊರಗೆ ವಾಸಿಸುವಂತೆ ಮಾಡಲಾಗುತ್ತಿತ್ತು.

ದಕ್ಷಿಣ ಭಾರತದಲ್ಲಿ ಹಳ್ಳಿ ಅಥವಾ ಪಟ್ಟಣದ ಕೆಲವು ಭಾಗಗಳಿಗೆ ಕೆಲವು ಜಾತಿಯವರಿಗೆ ಪ್ರವೇಶವಿಲ್ಲ. ಕೆಲವು ಬೀದಿಗಳಿಗೆ ಮುಕ್ತವಾಗಿ ಪ್ರವೇಶಿಸುವ ಹಕ್ಕಿಗಾಗಿ ತಿರುವಾಂಕೂರಿನ ವೈಕಂನಲ್ಲಿ ಅಶುದ್ಧ ಜಾತಿಯವರಿಂದ ನಡೆದ ಸತ್ಯಾಗ್ರಹದಿಂದ ಆ ಜಾತಿಗಳು ಅನುಭವಿಸುತ್ತಿದ್ದ ಅವಕಾಶ ವಂಚನೆಯಿಂದ ಸ್ವಲ್ಪಮಟ್ಟಿಗೆ ಪರಿಹಾರ ದೊರಕಿತು. ಮರಾಠರು ಮತ್ತು ಪೇಶ್ವಾಗಳ ಆಳ್ವಿಕೆಯಲ್ಲಿ ಮಧ್ಯಾಹ್ನ 3 ಗಂಟೆಯಿಂದ ಬೆಳಿಗ್ಗೆ 9 ಗಂಟೆಯವರೆಗೆ ಪೂನಾದ ಮುಖ್ಯದ್ವಾರದಲ್ಲಿ ಮಾಹರ್ ಮತ್ತು ಮಾಂಗ್ ಜಾತಿಯವರಿಗೆ ಪ್ರವೇಶವನ್ನು ನಿಷಿದ್ಧಗೊಳಿಸಲಾಗಿತ್ತು ಏಕೆಂದರೆ ಆ ಸಮಯದಲ್ಲಿ ಅವರ ನೆರಳು ತುಂಬಾ ದೂರದವರೆಗೂ ಹೋಗುತ್ತಿದ್ದುದರಿಂದ ಮೇಲ್ಜಾತಿಯವರಿಗೆ ಅದರಲ್ಲೂ ಮುಖ್ಯವಾಗಿ ಬ್ರಾಹ್ಮಣರಿಗೆ ಅದರಿಂದ ಮೈಲಿಗೆಯಾಗುತ್ತಿತ್ತು. ಆದರೆ ದ್ರಾವಿಡರ ದಕ್ಷಿಣದಲ್ಲಿ, (ವಿಶೇಷವಾಗಿ ತಮಿಳು ಭಾಷೆಯವರ ಪ್ರದೇಶದಲ್ಲಿ) ಬ್ರಾಹ್ಮಣರು ಅತ್ಯಂತ ಪ್ರಬಲರಾಗಿದ್ದ ಜಾಗದಲ್ಲಿ, ಗ್ರಾಮದ ಯಾವುದೇ ಪ್ರದೇಶಕ್ಕೆ ಪ್ರವೇಶಿಸಲು ನಿರ್ಬಂಧಗಳಿದ್ದವು. ಬ್ರಾಹ್ಮಣರಿಗೆ ದಾನ ಕೊಡಲಾದ ಗ್ರಾಮಗಳಿಗೆ ಪರಯ್ಯಾರಿಗೆ ಪ್ರವೇಶವಿರಲಿಲ್ಲ ಎನ್ನುವುದು ಎಲ್ಲರಿಗೂ ತಿಳಿದ ಸಂಗತಿ; ಆದರೆ ಪರಯ್ಯಾಗಳು ತಮ್ಮ ಬೀದಿಯಲ್ಲಿ ಬ್ರಾಹ್ಮಣರು ಹಾದು ಹೋಗದಂತೆ ನಿರ್ಬಂಧಿಸಿದ್ದರು ಎನ್ನುವುದು ಬಹಳ ವಿದ್ಯಾರ್ಥಿಗಳಿಗೆ ಗೊತ್ತಿಲ್ಲ; ಅದು ಎಷ್ಟರಮಟ್ಟಿಗಿತ್ತು ಎಂದರೆ ಯಾರಾದರೂ ಒಬ್ಬ ಬ್ರಾಹ್ಮಣ ಒಂದು ವೇಳೆ ಅವರ ಬೀದಿಯಲ್ಲಿ ಬಂದರೆ ಅವನಿಗೆ ಗಂಜಲದ ನೀರಿನ ಸ್ವಾಗತ ಕಾದಿರುತ್ತಿತ್ತು. "ಹೊಲೆಯರ ಬೀದಿಗಳಲ್ಲಿ ಯಾವುದೇ ಪೀಡನೆ ಇಲ್ಲದೆ ಹಾದು ಹೋಗಲು ಸಾಧ್ಯವಾದರೆ ಮಹಾ ಅದೃಷ್ಟ ನಮಗೆ ಕಾದಿದೆ ಎಂದು ಮೈಸೂರಿನ ಬ್ರಾಹ್ಮಣರು ಭಾವಿಸುತ್ತಿದ್ದರು." ಭಾರತದಾದ್ಯಂತ ಅಶುದ್ಧ ಜಾತಿಯವರು ಮೇಲ್‌ಜಾತಿಯವರು ಉಪಯೋಗಿಸುತ್ತಿದ್ದ ಗ್ರಾಮದ ಬಾವಿಯಿಂದ ನೀರು ತೆಗೆದುಕೊಳ್ಳದಂತೆ ನಿಷೇಧ ಹಾಕಲಾಗಿತ್ತು. ಶುದ್ಧ ಜಾತಿಗೆ ಸೇರಿದ ಹಿಂದು ತನ್ನ ಕಾಲಿನಿಂದ ತುಳಿದು ಅಶುದ್ಧನಾಗುತ್ತಾನೆ ಎನ್ನುವ ಕಾರಣಕ್ಕೆ ಮರಾಠ ದೇಶದಲ್ಲಿ ಅಸ್ಪೃಶ್ಯ ಜಾತಿಯ ಮಹಾರರು

ದಾರಿಯಲ್ಲಿ ಉಗುಳುವಂತಿರಲಿಲ್ಲ. ಅವನು ತನ್ನ ಕೊರಳಿಗೆ ಮಣ್ಣಿನ ಮಡಕೆಯನ್ನು ಕಟ್ಟಿಕೊಂಡು ಅದರಲ್ಲಿ ಉಗುಳಬೇಕಿತ್ತು. ಅಷ್ಟಲ್ಲದೆ ತನ್ನ ಹೆಜ್ಜೆ ಗುರುತುಗಳನ್ನು ಅಳಿಸಿ ಹಾಕಲು ಅವನು ತನ್ನ ಬೆನ್ನಿಗೆ ಮುಳ್ಳಿನ ಕೊಂಬೆಯನ್ನು ಕಟ್ಟಿಕೊಳ್ಳಬೇಕಾಗಿತ್ತು, ಮತ್ತು ದಾರಿಯಲ್ಲಿ ಹೋಗುವ ಪವಿತ್ರನಾದ ಬ್ರಾಹ್ಮಣನ ಮೇಲೆ ತನ್ನ ಅಪವಿತ್ರ ನೆರಳು ಬೀಳದೆ ಇರಲು ಅವನು ದಾರಿಯಲ್ಲಿ ಕೆಳಗೆ ಮಲಗಿ ಸಾಷ್ಟಾಂಗ ನಮಸ್ಕಾರ ಮಾಡಬೇಕಿತ್ತು. ಬೇರೆ ಭಾಗಗಳಿಗಿಂತ ದೇಹ ಸಾಮೀಪ್ಯದಿಂದ ಅಶುದ್ಧಗೊಳಿಸುವ ಆಚರಣೆಯು ಅಷ್ಟೇನೂ ವಿಪರೀತವಾಗಿರದ ಪಂಜಾಬಿನಲ್ಲಿ ದೊಡ್ಡ ಪಟ್ಟಣದ ದಾರಿಯಲ್ಲಿ ನಡೆದುಕೊಂಡು ಹೋಗುವ ಕಸ ಗುಡಿಸುವವನು ತಾನು ಕಸ ಗುಡಿಸುವವನು ಎಂದು ತೋರಿಸಿಕೊಳ್ಳಲು ತನ್ನ ಕೈಯಲ್ಲಿ ಅಥವಾ ಕಂಕುಳಲ್ಲಿ ಪೊರಕೆಯನ್ನು ಹಿಡಿದುಕೊಂಡು ಹೋಗಬೇಕಿತ್ತು ಮತ್ತು ಜನರಿಗೆ ಅಶುದ್ಧನಾದ ತಾನು ಬರುತ್ತಿದ್ದೇನೆ ಎಂದು ಎಚ್ಚರಿಸಲು ದೂರದಿಂದಲೆ ಗಟ್ಟಿಯಾಗಿ ಕೂಗಬೇಕಾಗಿತ್ತು. ಸಾರ್ವಜನಿಕ ವೆಚ್ಚದಲ್ಲಿ ನಡೆಯುತ್ತಿದ್ದ ಶಾಲೆಗಳಲ್ಲಿ ಚಮ್ಮಾರರು ಮತ್ತು ಮಹಾರ್ ಜಾತಿಯವರಿಗೆ ಪ್ರವೇಶವೇ ಇರಲಿಲ್ಲ. “ಶಾಲೆಯಲ್ಲಿರುವ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಕೆಳಜಾತಿಯ ಹುಡುಗನು ಶಾಲೆಯಲ್ಲಿ ಕುಳಿತುಕೊಳ್ಳಲಾಗದಷ್ಟು ಕಷ್ಟವನ್ನು ನೀಡುತ್ತಿದ್ದರು.” ಗುಜರಾತಿನಲ್ಲಿ ನಿಮ್ನ ಜಾತಿಯ ಹುಡುಗರು ತಮ್ಮ ಜಾತಿಯ ವಿಶಿಷ್ಟತೆಯನ್ನು ಪ್ರಕಟಿಸಲು ಕೋಡುಗಳನ್ನು ಧರಿಸುತ್ತಿದ್ದರು. ಪೇಶ್ವಾಗಳು ತಮ್ಮ ದಿನಚರಿಯಲ್ಲಿ ನಮೂದಿಸಿರುವ ಕೆಲವು ನಿರ್ಧಾರಗಳ ಆಧಾರದ ಮೇಲೆ ಮರಾಠ ದೇಶದಲ್ಲಿ ಕೆಲವು ಜಾತಿಗಳ ಅನರ್ಹತೆಯ ಬಗ್ಗೆ ಸುಳಿವು ದೊರೆಯುತ್ತದೆ. ಬಡಗಿ ಜಾತಿಯವರು ವಿರೋಧಿಸಿದರೂ ಕೂಡ ಕುಂಬಾರರು ಕುದುರೆಯ ಮೇಲೆ ತಮ್ಮ ವಧುವನ್ನು ಮೆರವಣಿಗೆ ಮಾಡುವುದಕ್ಕೆ ಮತ್ತು ಲಿಂಗಾಯತರ ವಿರೋಧವಿದ್ದರೂ ತಾಮ್ರದ ಕೆಲಸ ಮಾಡುವ ಜಾತಿಯವರು ಸಾರ್ವಜನಿಕ ಬೀದಿಯಲ್ಲಿ ಮೆರವಣಿಗೆ ಹೋಗುವುದಕ್ಕೆ ಆಳುವವರು (ಪೇಶ್ವಾಗಳು) ಅನುಮತಿಯನ್ನು ನೀಡಿದರು.

ದ್ರಾವಿಡ ಭಾರತದಲ್ಲಿ ಕೆಳ ಜಾತಿಗಳ ಅನರ್ಹತೆಯು ಅವರು ಯಾವ ಬಗೆಯ ಮನೆಯನ್ನುಕಟ್ಟಬೇಕು, ಯಾವು ಪರಿಕರಗಳನ್ನು ಉಪಯೋಗಿಸಿ ಅದನ್ನು ಕಟ್ಟಬೇಕು ಎನ್ನುವ ನಿಯಮವನ್ನು ವಿಧಿಸುವವರೆಗೆ ಹೋಯಿತು. ಪೂರ್ವ ಮತ್ತು ಪಶ್ಚಿಮ ಸಮುದ್ರ ತೀರದ ಭಟ್ಟಿ ಇಳಿಸುವ ಶಾಣಾರರು ಮತ್ತು ಇಝುವರು ಒಂದು ಮಹಡಿಗಿಂತ ಎತ್ತರವಾದ ಮನೆಯನ್ನು ಕಟ್ಟಿಸುವಂತಿರಲಿಲ್ಲ. ಮಲಬಾರಿನಲ್ಲಿ ಜಾತಿಗನುಗುಣವಾಗಿ ಮನೆಗೆಳಿಗೆ ಹೆಸರಿಡಲಾಗುತ್ತಿತ್ತು. ನಂಬೂದರಿ ಬ್ರಾಹ್ಮಣನ ಎದುರು ಕೆಳಗಿನ ಜಾತಿಯವರು ‘ಸಗಣಿತಿಪ್ಪೆ’ ಎನ್ನುವುದಕ್ಕಿಂತ ಹೆಚ್ಚಾಗಿ ತಮ್ಮ ಮನೆಯನ್ನು ಸಂಬೋಧಿಸಿಕೊಳ್ಳುವಂತಿರಲಿಲ್ಲ. ಮಲಬಾರಿನ ಮತ್ತು ಪೂರ್ವ ಸಮುದ್ರ ತೀರದ ಭಟ್ಟಿ ಇಳಿಸುವವರು, ಇಝುವರು, ಶಾಣಾರರು ಕೊಡೆಯನ್ನು ತೆಗೆದುಕೊಂಡು ಹೋಗುವಂತಿರಲಿಲ್ಲ, ಬೂಟುಗಳನ್ನು ಧರಿಸುವಂತಿರಲಿಲ್ಲ, ಹಸುವಿನ ಹಾಲನ್ನು ಕರೆಯುವಂತಿರಲಿಲ್ಲ ಅಥವಾ ಸಾಮಾನ್ಯವಾಗಿ ಬಳಕೆಯಲ್ಲಿರುವ ದೇಶದ ಭಾಷೆಯನ್ನೂ ಬಳಸುವಂತಿರಲಿಲ್ಲ. ಮಲಬಾರಿನಲ್ಲಿ ಆಮೆಯ ರೂಪದಲ್ಲಿರುವ ಮಣೆಯ ಮೇಲೆ ಬ್ರಾಹ್ಮಣರಿಗೆ ಮಾತ್ರ ಕೂರಲು ಅನುಮತಿ ಇತ್ತು, ಮತ್ತು ಇತರ ಯಾವುದೇ ಜಾತಿಯವರು ಕೂರಲು ಅಂತಹ ಮಣೆಯನ್ನು ಬಳಸಿದರೆ ಅವರಿಗೆ ಮರಣದಂಡನೆ ವಿಧಿಸಲಾಗುತ್ತಿತ್ತು. ಬ್ರಾಹ್ಮಣರನ್ನು ಹೊರತುಪಡಿಸಿ ಬೇರಾವ ಜಾತಿಯವರು ಸೊಂಟದ ಮೇಲಿನ ಭಾಗವನ್ನು ಮುಚ್ಚಿಕೊಳ್ಳುವಂತಿರಲಿಲ್ಲ. ಮಹಿಳೆಯರಿಗೆ ಸಂಬಂಧಿಸಿದಂತೆಯೂ ಕೂಡ 1865ರವರೆಗೆ ತಿಯಾ ಮತ್ತು ಇತರ ಕೆಳಗಿನ ಜಾತಿಯ ಮಹಿಳೆಯರು ತಮ್ಮ ದೇಹದ ಮೇಲ್ಭಾಗವನ್ನು ಬೆತ್ತಲೆಯಾಗಿಯೆ ಇಟ್ಟುಕೊಳ್ಳಬೇಕೆಂಬ ನಿಯಮವಿತ್ತು. ಪೇಶ್ವರ ಆಳ್ವಿಕೆಯಲ್ಲಿ ಅಪರಾಧದ ಸ್ವರೂಪದ ಬದಲಾಗಿ ಅಪರಾಧಿಯ ಜಾತಿಯ ಆಧಾರದ

ಮೇಲೆಯೆ ಶಿಕ್ಷೆಯನ್ನು ಹೆಚ್ಚಾಗಿ ನಿರ್ಧರಿಸಲಾಗುತ್ತಿತ್ತು. ಕಠಿಣ ಶ್ರಮದ ಶಿಕ್ಷೆ ಅಥವಾ ಮರಣದಂಡನೆಯ ಶಿಕ್ಷೆಯನ್ನು ಸಾಮಾನ್ಯವಾಗಿ ಕೆಳಗಿನ ಜಾತಿಯವರಿಗೆ ವಿಧಿಸಲಾಗುತ್ತಿತ್ತು.

ತಮಿಳುನಾಡಿನಲ್ಲಿ ಬಹಳ ಕಾಲದಿಂದಲೂ ಬ್ರಾಹ್ಮಣೇತರ ಜಾತಿಯ ಒಂದು ಪಂಗಡದ ಬಹಳಷ್ಟು ಜನರನ್ನು ಬಲಗೈ ಮತ್ತು ಎಡಗೈ ಜಾತಿಗಳೆಂದು ವಿಂಗಡಿಸಲಾಗಿತ್ತು. ಕುದುರೆಯನ್ನೇರಿ ಮೆರವಣಿಗೆ ಮಾಡಿಕೊಳ್ಳುವುದು, ನಿರ್ದಿಷ್ಟ ಸಾಧನಗಳ ಮೂಲಕ ತಮ್ಮ ಅಂತಸ್ತನ್ನು ತೋರ್ಪಡಿಸಿಕೊಳ್ಳುವುದು, ಮತ್ತು ತಮ್ಮ ಮದುವೆ ಮಂಟಪಕ್ಕೆ ಹನ್ನೆರಡು ಕಂಬಗಳನ್ನು ಆಧಾರವಾಗಿಸುವುದು ಮುಂತಾದ ಕೆಲವು ಸವಲತ್ತುಗಳನ್ನು 'ಎಡಗೈ' ಯವರಿಗೆ ಕಡ್ಡಾಯವಾಗಿ ನಿರಾಕರಿಸಿ ತಮಗೆ ಮಾತ್ರ ಅವು ಸೇರಿದ್ದೆಂದು 'ಬಲಗೈ' ಯವರು ಪ್ರತಿಪಾದಿಸುತ್ತಿದ್ದರು. 'ಎಡಗೈ' ಯವರು ಮದುವೆ ಮಂಟಪವನ್ನು ನಿರ್ಮಿಸುವಾಗ ಹನ್ನೊಂದು ಕಂಬಗಳಿಗಿಂತ ಹೆಚ್ಚು ಬಳಸಬಾರದೆಂದು ಮತ್ತು ಮದುವೆಯಲ್ಲಿ 'ಬಲಗೈ'ಯವರಿಗೆ ವಿಶಿಷ್ಟವಾದ ಅಂತಸ್ತಿನ ತೋರ್ಪಡಿಕೆಯ ಸಾಧನಗಳನ್ನು ಬಳಸಬಾರದೆಂದು ಒತ್ತಾಯಿಸಲಾಗುತ್ತಿತ್ತು.

ಕೆಲವು ವಿಧಿಗಳನ್ನು ಅನುಸರಿಸಿ ಬ್ರಾಹ್ಮಣರ ಸಮಾರಂಭಗಳನ್ನು ನಡೆಸಲಾಗುತ್ತಿತ್ತು, ಮತ್ತು ವೈದಿಕ ಮತ್ತು ಪೌರಾಣಿಕವೆಂಬ ಎರಡು ವಿಧದ ವಿಧಿಗಳು ವಿಕಾಸಗೊಂಡವು. ವೈದಿಕ ವಿಧಿಗಳನ್ನು ವೈದಿಕ ಮಂತ್ರಗಳ ಮೂಲಕ ಆಚರಿಸಲಾಗುತ್ತಿತ್ತು ಮತ್ತು ಅವುಗಳಿಗೆ ಹೆಚ್ಚಿನ ಪಾವಿತ್ರ್ಯವನ್ನು ಆರೋಪಿಸಲಾಗುತ್ತಿತ್ತು, ಆದರೆ ಪೌರಾಣಿಕ ವಿಧಿಗಳು ದೈವ ಪ್ರಕಟಿತ ಜ್ಞಾನವನ್ನು ಆಧರಿಸಿರದೆ ಕಡಿಮೆ ಪಾವಿತ್ರ್ಯಹೊಂದಿದ್ದ ಸೂತ್ರಗಳನ್ನು ಆಧರಿಸಿದ್ದವು. 1843ರಲ್ಲಿ ಬ್ರಾಹ್ಮಣ ಪ್ರಾಧ್ಯಾಪಕನೊಬ್ಬನು ನಿರ್ದಿಷ್ಟವಾದ ಪಠ್ಯವೊಂದು ಪಾಣಿನಿಯ ವ್ಯಾಕರಣದ ಉದ್ಧರಣೆಗಳನ್ನು ಹೊಂದಿರುವುದರಿಂದ ಪ್ರಕಟಿಸಿದರೆ ಅಪವಿತ್ರವಾಗುವ ಕಾರಣ ಅದನ್ನು ಪ್ರಕಟಿಸಬಾರದೆಂದು ಬಾಂಬೆಯ ಶಿಕ್ಷಣ ಮಂಡಳಿಗೆ ಸಲಹೆ ನೀಡಿದ್ದನು ಎನ್ನುವ ಸಂಗತಿಯು ಪಾವಿತ್ರ್ಯ ಉಳಿಸಿಕೊಳ್ಳುವುದಕ್ಕೆ ಎಷ್ಟು ಮಹತ್ವ ನೀಡಲಾಗಿತ್ತು ಎಂಬುದನ್ನು ಸೂಚಿಸುತ್ತದೆ. ಶೂದ್ರರು ಪೌರಾಣಿಕ ವಿಧಿಗಳಲ್ಲೆ ತೃಪ್ತಿಪಟ್ಟುಕೊಳ್ಳಬೇಕಾಯಿತು. ಅಶುದ್ಧ ಜಾತಿಗಳಿಗೆ ವಿಧಿಗಳನ್ನು ನೆರವೇರಿಸಿಕೊಡಲು ಯಾವುದೇ ಬ್ರಾಹ್ಮಣನು – ಅವನು ಒಬ್ಬ ನಕಲಿ ಮತ್ತು ಧರ್ಮಭ್ರಷ್ಟನಾಗಿದ್ದ ಹೊರತು – ತಯಾರಿರಲಿಲ್ಲ. ಸವಾಯಿ ಮಾಧವರಾವ್ ಕಾಲದಲ್ಲಿ ಪೇಶ್ವಾ ಸರ್ಕಾರವು ಮಹಾರರು ಅತಿಶೂದ್ರರಾಗಿದ್ದರಿಂದ (ಅಂದರೆ ಶೂದ್ರರಲ್ಲೆ ಕನಿಷ್ಟರು) ನಿಯಮಿತವಾದ ಬ್ರಾಹ್ಮಣರಿಂದ ತಮ್ಮ ವಿವಾಹ ವಿಧಿಗಳನ್ನು ನೇರವೇರಿಸಿಕೊಳ್ಳುವಂತಿಲ್ಲ ಎಂದು ಆದೇಶಿಸಿತು. ಅವರ ಜಾತಿಯ ಪುರೋಹಿತರಾದ ಮೆದೆ – ಮಹಾರ್‌ರವರ ಸೇವೆಯಲ್ಲಿಯೆ ತೃಪ್ತಿಪಟ್ಟುಕೊಳ್ಳಬೆಕೆಂದು ಅವರಿಗೆ ತಿಳಿಸಲಾಯಿತು. ಬ್ರಾಹ್ಮಣರು ದಕ್ಷಿಣೆ ನೀಡುವವರಿಗೆ ಪುಣ್ಯ ಸಂಚಯವಾಗುವಂತಹ ಶುದ್ಧವಾದ ಶೂದ್ರರಿಂದ ಮಾತ್ರ ದಕ್ಷಿಣೆಯನ್ನು ಸ್ವೀಕರಿಸುತ್ತಿದ್ದರು. ಮರಾಠ ದೇಶದಲ್ಲಿದ್ದ ಪ್ರಭುಗಳಂತಹ ಮುಂದುವರೆದ ಜಾತಿಯ ವೈದಿಕ ನಿಯಮಗಳ ಪ್ರಕಾರ ವಿಧಿಯಾಚರಣೆ ಮಾಡಲು ತನಗೆ ಹಕ್ಕಿದೆ ಎನ್ನುವುದನ್ನು ಸಾಬೀತು ಪಡಿಸಬೇಕಾಯಿತು. ಅವರಿಗಿದ್ದ ಅಂತಹ ಹಕ್ಕುಗಳನ್ನು ನಂತರದ ಪೇಶ್ವರ ಕಾಲದಲ್ಲಿ ಪ್ರಶ್ನಿಸಲಾಗಿತ್ತು. ಬ್ರಾಹ್ಮಣರನ್ನು ಹೊರತು ಪಡಿಸಿ ಮತ್ತಾವ ಜಾತಿಯೂ ಕೆಲವು ನಿರ್ದಿಷ್ಟ ದಿವ್ಯಕರ್ಮಗಳನ್ನು ಮಾಡುವಂತಿರಲಿಲ್ಲ. ಅತ್ಯಂತ ಪವಿತ್ರವಾದ ಸಾಹಿತ್ಯವನ್ನು ಶೂದ್ರರು ಅಧ್ಯಯನ ಮಾಡುವಂತಿರಲಿಲ್ಲ. ಬ್ರಾಹ್ಮಣರನ್ನು ಹೊರತುಪಡಿಸಿ ಮತ್ತಾರನ್ನೂ ಪುರೋಹಿತರನ್ನಾಗಿ ಯಾವ ಜಾತಿಯೂ ನೇಮಕ ಮಾಡಿಕೊಳ್ಳುವ ಹಾಗಿರಲಿಲ್ಲ. ಇದಕ್ಕೆ ದಕ್ಷಿಣ ಭಾರತದಲ್ಲಿದ್ದ ಕೆಲವು ಜಾತಿಗಳು ಅಪವಾದವಾಗಿದ್ದವು. ಮದ್ರಾಸಿನ ಕುಶಲಕರ್ಮಿಗಳು ಅವರದೇ ಆದ ಪುರೋಹಿತರನ್ನು

ನೇಮಿಸಿಕೊಳ್ಳುತ್ತಿದ್ದರು ಎನಿಸುತ್ತದೆ. ಪೇಶ್ವಾ ಆಳ್ವಿಕೆಯ ಕೊನೆಯ ಹಂತದಲ್ಲಿ ಅಕ್ಕಸಾಲಿಗರು ತಮ್ಮದೇ ಜಾತಿಯ ಪುರೋಹಿತರನ್ನು ನೇಮಿಸಿಕೊಳ್ಳುವ ತಮ್ಮ ಹಕ್ಕನ್ನು ಸ್ಥಾಪಿಸಿದ್ದರು. ದೇವಸ್ಥಾನದ ಗರ್ಭಗುಡಿಯಲ್ಲಿ ಬ್ರಾಹ್ಮಣರನ್ನು ಹೊರತುಪಡಿಸಿ ಮತ್ತಾರಿಗೂ ಪ್ರವೇಶವಿರಲಿಲ್ಲ. ಶೂದ್ರರು ಮತ್ತು ಇತರ ಮೇಲ್ಜಾತಿಯವರು ಅದರ ಹೊರಗೆ ನಿಲ್ಲಬೇಕಾಗಿತ್ತು. ಅಶುದ್ಧ ಜಾತಿಗಳು, ಅದರಲ್ಲೂ ಅಸ್ಪೃಶ್ಯರು ದೇವಸ್ಥಾನದ ಹೊರ ಅಂಕಣವನ್ನೂ ಪ್ರವೇಶಿಸುವಂತಿರಲಿಲ್ಲ. ಅವರು ಹೊರ ಅಂಗಳದಲ್ಲಿಯೇ ಇರಬೇಕಿತ್ತು. ದಕ್ಷಿಣ ಮಲಬಾರಿನಲ್ಲಿ ಮೇಲ್ಜಾತಿಯವರು ತಮ್ಮ ಜಾತಿಯವರ ಹೆಣಗಳ ಶವಸಂಸ್ಕಾರ ಮಾಡಲು ತಿಯಾನ್ ಜಾತಿಯವರಿಗೆ ಬಿಡುತ್ತಿರಲಿಲ್ಲ.

ಒಬ್ಬ ಬ್ರಾಹ್ಮಣನು ಬ್ರಾಹ್ಮಣರನ್ನು ಹೊರತುಪಡಿಸಿ ಮತ್ತಾರಿಗೂ ತಲೆಬಾಗಿ ವಂದಿಸುತ್ತಿರಲಿಲ್ಲ, ಆದರೆ ಬೇರೆಯವರು ಅವರಿಗೆ ವಂದಿಸಬೇಕಾಗಿತ್ತು; ಮತ್ತು ಅವನಿಗೆ ವಂದಿಸುತ್ತಿದ್ದವರಿಗೆ ಅವನು ಆಶೀರ್ವದಿಸುತ್ತಿದ್ದನು. ಕೆಳಜಾತಿಯ ಕೆಲವರು, ವಿಶೇಷವಾಗಿ ಉತ್ತರ ಭಾರತದವರು, ಬ್ರಾಹ್ಮಣರ ಬಗೆಗಿನ ಗೌರವವನ್ನು ಎಷ್ಟರಮಟ್ಟಿಗೆ ಮುಂದುವರೆಸಿಕೊಂಡು ಹೋಗುತ್ತಾರೆ ಎಂದರೆ ಅವರು ಬ್ರಾಹ್ಮಣರ ನೆರಳನ್ನೂ ದಾಟುವುದಿಲ್ಲ, ಮತ್ತು ಕೆಲವು ವೇಳೆ ಬ್ರಾಹ್ಮಣರ ಹೆಬ್ಬೆರಳನ್ನು ಅದ್ದಿದ ನೀರನ್ನು ಸೇವಿಸದೆ ಆಹಾರವನ್ನು ಸ್ವೀಕರಿಸುತ್ತಿರಲಿಲ್ಲ. ಬ್ರಾಹ್ಮಣನು ಮಾತ್ರ ತನ್ನ ಶ್ರೇಷ್ಟತೆಯ ಬಗ್ಗೆ ಎಷ್ಟು ಪ್ರಜ್ಞಾಪೂರ್ವಕವಾಗಿದ್ದನೆಂದರೆ ಅವನು ಶೂದ್ರ ಮನೆಯಲ್ಲಿದ್ದ ದೇವರ ಮೂರ್ತಿಗಳಿಗೂ ತಲೆಬಾಗಿ ವಂದಿಸುತ್ತಿರಲಿಲ್ಲ. ಬ್ರಾಹ್ಮಣನು ಅತ್ಯಂತ ಪ್ರಮುಖವಾದ ಪ್ರಜೆ ಎಂದು ಪರಿಗಣಿಸಲ್ಪಟ್ಟಿದ್ದರಿಂದ ಅವನಿಗೆ ರಾಜನು ರಕ್ಷಣೆ ನೀಡಬೇಕಾಗಿತ್ತು. ಎಷ್ಟರಮಟ್ಟಿಗೆಂದರೆ ರಾಜನೆಂದರೆ ಬ್ರಾಹ್ಮಣರು ಮತ್ತು ಗೋವುಗಳನ್ನು ರಕ್ಷಿಸುವವನು ಎಂದೇ ಅರ್ಥೈಸಲಾಗುತ್ತಿತ್ತು ಮತ್ತು ಇತರ ಪ್ರಜೆಗಳು ಉಲ್ಲೇಖಿಸುವಷ್ಟು ಪ್ರಮುಖರಾಗಿರಲಿಲ್ಲ.

ಹದಿನೇಳನೇ ಶತಮಾನದ ಆರಂಭದ ಮರಾಠ ದೇಶದಲ್ಲಿ ರಾಮದಾಸ್ ಎನ್ನುವ ಶ್ರೇಷ್ಟ ದಾರ್ಶನಿಕರು ಸಮಾನವಾದ ಸ್ಥಳದಲ್ಲಿ ಜನರು ಒಟ್ಟಾಗಿ ಬಾಳಬೇಕು ಎನ್ನುವ ಚಿಂತನೆಯನ್ನು ಜನರ ಮನಸಿಗೆ ತುಂಬಲು ಪ್ರಯತ್ನಿಸಿದರು. ಪೇಶ್ವರ ಆಳ್ವಿಕೆಯ ಅಂತಿಮ ಹಂತದಲ್ಲಿ (ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ), ಈ ಆದರ್ಶವು ಮರೆಯಾಗಿ ಬ್ರಾಹ್ಮಣರ ಪ್ರಾಧಾನ್ಯ ಎದ್ದು ಕಾಣಿಸುತ್ತಿತ್ತು, ಅವರನ್ನು ಸಂತೋಷಪಡಿಸುವುದಕ್ಕಿಂತ ಹೆಚ್ಚಿನ ಕೆಲಸ ಪ್ರಭುತ್ವಕ್ಕೆ ಮತ್ತಾವುದೂ ಇರಲಿಲ್ಲ. ಹಿಂದೂಗಳ ಆಳ್ವಿಕೆಯಲ್ಲಿ ಬ್ರಾಹ್ಮಣರು ಅವರೇ ಬೆಳಸಿದ ಪ್ರಭುತ್ವವು ನಿರ್ವಹಿಸಬೇಕಾದ ಸಿದ್ಧಾಂತವನ್ನು ಆಧರಿಸಿ ಬೇರೆಯವರಿಗಿಲ್ಲದ, ಅವರಿಗೇ ವಿಶೇಷವಾದ ಸವಲತ್ತುಗಳನ್ನು ಪಡೆದುಕೊಂಡಿದ್ದರೆಂದು ಕಾಣಿಸುತ್ತದೆ. ಬಹುಶಃ ಅವರು ಬಹಳ ಪ್ರಮುಖವಾದ ಹುದ್ದೆಗಳನ್ನು ಅಲಂಕರಿಸಿದ್ದು ಇದಕ್ಕೆ ಕಾರಣವಾಗಿರಬಹುದು. ಹಾಗಾಗಿ, ಈ ಮೇಲೆ ಉಲ್ಲೇಖಿಸಲಾದ ಸಮಯದಲ್ಲಿ ಮರಾಠ ಪ್ರದೇಶದಲ್ಲಿ ಕೊಂಕಣಸ್ಥ ಬ್ರಾಹ್ಮಣ ಗುಮಾಸ್ತರುಗಳು ಅವರ ವಸ್ತುಗಳ ಮೇಲೆ ತೆರಿಗೆ ವಿನಾಯಿತಿ ಮತ್ತು ಆಮದು ಮಾಡಿಕೊಳ್ಳುತ್ತಿದ್ದ ಜೋಳವನ್ನು ಯಾವುದೇ ಸಾಗಾಣಿಕೆ ವೆಚ್ಚವಿಲ್ಲದೆ ಹಡಗಿನಲ್ಲಿ ಅವರಿಗೆ ತಂದುಕೊಡುವ ಸವಲತ್ತುಗಳನ್ನು ಪಡೆದುಕೊಂಡಿದ್ದರು. ದೇಶದ ಕೆಲವು ಭಾಗಗಳಲ್ಲಿ ಬ್ರಾಹ್ಮಣ ಭೂಮಾಲೀಕರು ತಮ್ಮ ಭೂಮಿಯ ಮೇಲಿನ ತೆರಿಗೆಯನ್ನು ಬೇರೆಯವರಿಗಿಂತ ಕಡಿಮೆ ದರದಲ್ಲಿ ನಿಗದಿಪಡಿಸಿಕೊಳ್ಳುತ್ತಿದ್ದರು. ಬ್ರಾಹ್ಮಣರಿಗೆ ಮರಣದಂಡನೆಯಿಂದ ವಿನಾಯತಿ ಇತ್ತು, ಮತ್ತು ಅವರನ್ನು ಕೋಟೆಯೊಳಗೆ ಬಂಧಿಸಿಟ್ಟಾಗ ಬೇರೆಯವರಿಗಿಂತ ಅವರನ್ನು ಉತ್ತಮವಾಗಿ ನೋಡಿಕೊಳ್ಳಲಾಗುತ್ತಿತ್ತು. ಫೋರ್ಬ್ಸ್ ಹೀಗೆನ್ನುತ್ತಾನೆ: "ತಿರುವಾಂಕೂರಿನ ಬ್ರಾಹ್ಮಣರು, ಭಾರತದ ಬಹಳಷ್ಟು ಇತರ ಭಾಗಗಳಲ್ಲಿದ್ದಂತೆ, ಸಾಧ್ಯವಾದಷ್ಟು ಮಟ್ಟಿಗೆ ತಮಗೆ ಶಿಕ್ಷೆಯಿಂದ ವಿನಾಯತಿಯನ್ನು

ಪಡೆದುಕೊಳ್ಳಲು ವ್ಯವಸ್ಥೆ ಮಾಡಿಕೊಂಡಿದ್ದರು; ಕನಿಷ್ಟ ಪಕ್ಷ ಒಂದೇ ರೀತಿಯ ಅಪರಾಧಕ್ಕೆ ಬೇರೆ ಜಾತಿಯವರಿಗಿಂತ ತಮಗೆ ಕಡಿಮೆ ಶಿಕ್ಷೆ ದೊರಕುವಂತೆ ನೋಡಿಕೊಳ್ಳುತ್ತಿದ್ದರು." ಬಂಗಾಳದಲ್ಲಿ ಭೂಮಿಗೆ ವಿಧಿಸಲಾಗುತ್ತಿದ್ದ ತೆರಿಗೆಯನ್ನು ಜಾತಿಯನ್ನು ಆಧರಿಸಿ ಆಗಾಗ ಬದಲಾವಣೆ ಮಾಡಲಾಗುತ್ತಿತ್ತು.

() ಉದ್ಯೋಗದ ಆಯ್ಕೆಯಲ್ಲಿ ನಿರ್ಬಂಧ ರಹಿತತೆಯ ಕೊರತೆ : ಸಾಮಾನ್ಯವಾಗಿ ಒಂದು ಜಾತಿ ಅಥವಾ ಒಂದು ಗುಂಪಿಗೆ ಸೇರಿದ ಜಾತಿಗಳು ಕೆಲವು ವೃತ್ತಿಗಳನ್ನು ಅವು ತಮ್ಮ ವಂಶಪಾರಂಪರ್ಯ ಉದ್ಯೋಗವೆಂದು ಪರಿಗಣಿಸಿದ್ದವು. ಅದನ್ನು ಬಿಟ್ಟು ಮತ್ತೊಂದು ವೃತ್ತಿಯನ್ನು ಆರಿಸಿಕೊಳ್ಳುವುದು, ಅದು ಲಾಭದಾಯಕವಾಗಿದ್ದರೂ ಕೂಡ, ಸರಿಯಾದುದಲ್ಲ ಎನ್ನುವ ಭಾವನೆ ಇತ್ತು. ಹಾಗಾಗಿ, ಬ್ರಾಹ್ಮಣನು ತಾನು ಪೌರೋಹಿತ್ಯ ಮಾಡುವುದು ಸರಿ ಎಂದು ತಿಳಿದಿದ್ದನು, ಹಾಗೆಯೆ, ಚಮ್ಮಾರನು ಚರ್ಮವನ್ನು ಹದ ಮಾಡುವುದು ಮತ್ತು ಬೂಟುಗಳನ್ನು ತಯಾರಿಸುವುದು ತನ್ನ ಕರ್ತವ್ಯವೆಂದು ಭಾವಿಸಿದ್ದನು. ಇದು ಸಾಮಾನ್ಯವಾಗಿದ್ದ ಆಚರಣೆಗಳು ಮಾತ್ರ. ಏಕೆಂದರೆ ವ್ಯಾಪಾರ, ಕೃಷಿ, ಭೂಮಿಯಲ್ಲಿ ಕೂಲಿ ಮಾಡುವುದು, ಮತ್ತು ಮಿಲಿಟರಿ ಸೇವೆ ಇವೆಲ್ಲವೂ ಯಾವ ಜಾತಿಯವರು ಬೇಕಾದರೂ ಮಾಡಬಹುದಾದ ಕೆಲಸಗಳಾಗಿದ್ದವು. ಕರಕುಶಲ ವೃತ್ತಿಯವರಲ್ಲಿ ಹೆಚ್ಚು ಕಡಿಮೆ ಸಮಾನ ಸ್ಥಾನಮಾನವುಳ್ಳ ಉದ್ಯೋಗಗಳು ಯಾವುದೇ ಪ್ರಾಸಂಗಿಕ ಅಧೋಗತಿಗೊಳಗಾಗದೆ ಆ ಜಾತಿಗಳ ಸದಸ್ಯರಿಗೆ ಲಭ್ಯವಿದ್ದವು. ಯಾವುದೇ ಜಾತಿಯು ತನ್ನ ಸದಸ್ಯರಿಗೆ ಭಟ್ಟಿ ಇಳಿಸುವುದು ಮತ್ತು ಸೇಂದಿ ಕಾಯಿಸುವಂತಹ ಗೌರವವಿಲ್ಲದ ವೃತ್ತಿಯಲ್ಲಿ ಅಥವಾ ಕಸ ತೆಗೆಯುವ ಅಥವಾ ಚರ್ಮ ಹದ ಮಾಡುವಂತಹ ಕೆಲಸಗಳಲ್ಲಿ ತೊಡಗಿಕೊಳ್ಳಲು ಬಿಡುತ್ತಿರಲಿಲ್ಲ. ಒಂದು ಉದ್ಯೋಗವನ್ನು ಆಯ್ಕೆ ಮಾಡಿಕೊಳ್ಳಲು ಇದ್ದ ನಿರ್ಬಂಧವು ಕೇವಲ ತಮ್ಮ ಜಾತಿಯವರ ನೈತಿಕ ಅಥವಾ ಸಾಮಾಜಿಕ ನಿರ್ಬಂಧ ಮಾತ್ರವಾಗಿರಲಿಲ್ಲ. ಇತರ ಜಾತಿಯ ಜನರು ತಾವು ಮಾಡುತ್ತಿದ್ದ ವೃತ್ತಿಗೆ ಕೈ ಹಾಕುವುದನ್ನು ಇತರ ಜಾತಿಯವರೂ ಕೂಡ ನಿರ್ಬಂಧಿಸುತ್ತಿದ್ದರು. ಅಂತಹ ನಿರ್ಬಂಧಿತ ನಿಯಮಗಳಲ್ಲಿ ಬ್ರಾಹ್ಮಣರಾಗಿ ಹುಟ್ಟಿದವರ ಹೊರತು ಬೇರಾರೂ ಪೌರೋಹಿತ್ಯ ವೃತ್ತಿಯನ್ನು ಮಾಡುವಂತಿರಲಿಲ್ಲ. ಇದರ ಪರಿಣಾಮವಾಗಿ ಮೂಲನಿವಾಸಿಗಳ ದೇವತಾ ವಿಗ್ರಹಗಳನ್ನು ಆರಾಧಿಸುವವರನ್ನು ಅವರಷ್ಟಕ್ಕೆ ಬಿಟ್ಟು, ಅಶುದ್ಧವೆನಿಸಿಕೊಳ್ಳದ ಯಾವುದೇ ವೃತ್ತಿಯನ್ನು ಅವರ ಅಭಿರುಚಿಗೆ ತಕ್ಕಂತೆ ಮಾಡುತ್ತಿದ್ದ ಬ್ರಾಹ್ಮಣರು ಪೌರೋಹಿತ್ಯ ವೃತ್ತಿಯ ಮೇಲೆ ಮಾತ್ರ ಸಂಪೂರ್ಣ ಸ್ವಾಮ್ಯಹೊಂದಿದ್ದರು. ಮರಾಠ ದೇಶದ ಕೊಂಕಣಸ್ಥ ಮತ್ತು ದೇಶಸ್ಥ ಬ್ರಾಹ್ಮಣರು ಎಲ್ಲ ತರಹದ ಕಛೇರಿಗಳಲ್ಲಿ ಗ್ರಾಮ ಲೆಕ್ಕಿಗನಂತಹ ಕೆಲಸವನ್ನೂ ಒಳಗೊಂಡು ಸೆಕ್ಯುಲರ್ ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಮರಾಠರ ದಂಗೆ ಮತ್ತು ಅದರ ನಂತರ ಶಸ್ತ್ರಾಸ್ತ್ರ ವೃತ್ತಿಗೆ ಬ್ರಾಹ್ಮಣರು ಭಾರಿ ಸಂಖ್ಯೆಯಲ್ಲಿ ಬಂದರು. ಭಾರತೀಯ ದಂಗೆಗೆ ಮೊದಲು ಕನೌಜಿಯಾ ಬ್ರಾಹ್ಮಣರು ಬಹಳ ಸಂಖ್ಯೆಯಲ್ಲಿ ಬಂಗಾಳದ ಸೈನ್ಯಕ್ಕೆ ಸಿಪಾಯಿಗಳಾಗಿ ಸೇರುತ್ತಿದ್ದರು. ಬಂಗಾಳದ ಕೆಲವು ರಾಹ್ರಿ ಬ್ರಾಹ್ಮಣರು ಮಹಮದೀಯರ ಆಳ್ವಿಕೆಯ ಸೇವೆಯನ್ನು ಮಾಡಲು ಒಪ್ಪಿಕೊಂಡಿದ್ದರು. ರಾಜಾಸ್ಥಾನದ ಕೆಲವು ಬ್ರಾಹ್ಮಣರು ಅವರ ಮರ್ವಾಡಿ ಧಣಿಯರ ಸೇವೆಯಲ್ಲಿ ತೊಡಗಿಕೊಂಡಿದ್ದರು. ಬುಕಾನನ್ ಪ್ರಕಾರ ಕರ್ನಾಟಕದ ಕೆಳಭಾಗದಲ್ಲಿದ್ದ ಬಹಳ ಸಂಖ್ಯೆಯ ಬ್ರಾಹ್ಮಣರು ಹೆಚ್ಚು ಕಡಿಮೆ ಕಂದಾಯ ಸಂಗ್ರಹಣೆಯ ಎಲ್ಲ ಕಛೇರಿಗಳಲ್ಲಿ ತುಂಬಿಹೋಗಿದ್ದರು ಮತ್ತು ಮಾಹಿತಿದಾರರಾಗಿಯೂ ಕಾರ್ಯನಿರ್ವಹಿಸುತ್ತಿದ್ದರು. ಮಧ್ಯ ಭಾರತದ ಹಿಂದೂಸ್ಥಾನಿ ಬ್ರಾಹ್ಮಣರ ಬಗ್ಗೆ ಅವರಲ್ಲಿ ಸಾಕಷ್ಟು ಸಂಖ್ಯೆಯ ಜನರು ವ್ಯಾಪಾರದಲ್ಲಿ ತೊಡಗಿಕೊಂಡಿದ್ದಾರೆ ಎಂದು ಹೇಳಲಾಗುತ್ತದೆ. ತುಳು ದೇಶದ ಹವ್ಯಕ ಬ್ರಾಹ್ಮಣರು ನೇಗಿಲು ಹಿಡಿಯುವುದೊಂದನ್ನು ಬಿಟ್ಟು ಮಿಕ್ಕೆಲ್ಲ ಕೃಷಿ

ಕೆಲಸಗಳನ್ನು ಮಾಡುತ್ತಿದ್ದರು. ಉತ್ತರ ಪ್ರದೇಶದ ಕನೌಜಿಯಾ ಬ್ರಾಹ್ಮಣರು ತಮ್ಮ ಕೈಗಳಿಂದಲೆ ನೇಗಿಲನ್ನು ಹಿಡಿದು ಉಳುಮೆ ಮಾಡುತ್ತಿದ್ದರು ಎಂದು ಪ್ರತಿಪಾದಿಸಲಾಗಿದೆ. ಅಲ್ಲಿಯ ಸನಾಧ್ಯ ಬ್ರಾಹ್ಮಣರು ಅಂಗಡಿ ಮತ್ತು ಬೀದಿ ವ್ಯಾಪಾರದಿಂದ ಬದುಕು ಸಾಗಿಸುತ್ತಿದ್ದರು. ರಾಜಾಸ್ಥಾನದಲ್ಲಿ ಬ್ರಾಹ್ಮಣರು ಅವರ ಭೂಮಿಯಲ್ಲಿ ಏನೆಲ್ಲಾ ಕೆಲಸಗಳನ್ನು ಮಾಡಬೇಕಾಗಿತ್ತೋ ಅದನ್ನೆಲ್ಲಾ ಮಾಡುತ್ತಿದ್ದರಲ್ಲದೆ ಅದರ ಉತ್ಪನ್ನವನ್ನು ಅಲ್ಲಿ ವಾಸಿಸುತ್ತಿದ್ದ ಹೆಚ್ಚು ಸಿರಿವಂತರಲ್ಲಿ ಕೆಲಸಕ್ಕೆ ಸೇರುತ್ತಿದ್ದರು. ಮದ್ರಾಸಿನ ಬ್ರಾಹ್ಮಣರು ನಾಗರಿಕ, ಸಾರ್ವಜನಿಕ ಮತ್ತು ಮಿಲಿಟರಿ ಸೇವೆಗಳು, ವ್ಯಾಪಾರ, ಕೃಷಿ, ಕೈಗಾರಿಕೆ, ಮತ್ತು ಕೂಲಿ ಕೆಲಸಗಾರರಾಗಿಯೂ ಕೆಲಸ ಮಾಡುತ್ತಿದ್ದರು. ಅಕ್ಬರ್‌ನ ಕಾಲದಲ್ಲಿಯೂ ಸಹ ಬ್ರಾಹ್ಮಣರು ವ್ಯಾಪಾರ, ಕೃಷಿ, ಅಥವಾ ಮತ್ತಾವುದೇ ಲಾಭಾದಾಯಕವಾದ ಕೆಲಸಗಳಲ್ಲಿ ತೊಡಗಿಕೊಳ್ಳುತ್ತಿದ್ದರೆಂದು ತೋರುತ್ತದೆ.

ಒಂದಕ್ಕಿಂತ ಹೆಚ್ಚು ಜಾತಿಗಳು ಕೃಷಿಯಲ್ಲಿ ತೊಡಗಿಕೊಂಡಿವೆ. ಹಾಗಾಗಿ ನಮಗೆ ಮದ್ರಾಸಿನಲ್ಲಿ ವೆಲ್ಲಾಳರು, ಪಲ್ಲಿಸ್, ಆಗಮುದಿಯನ್ಸ್, ಮಲಯಾಳಿಗಳು ಇದ್ದಾರೆ. ಪಂಚಕಳಸಿ ಎನ್ನುವ ಗುಂಪಿಗೆ ಸೇರಿಸಲಾದ ಐದು ಕರಕುಶಲ ಜಾತಿಗಳಿಗೆ ಸಂಬಂಧಿಸಿದಂತೆ ವ್ಯಕ್ತಿಗಳು ತಮ್ಮ ಸಾಮಾಜಿಕ ಸ್ಥಾನಮಾನಕ್ಕೆ ಧಕ್ಕೆಯಾಗದಂತೆ ಮತ್ತು ಜಾತಿಯೊಳಗೆ ವಿವಾಹವಾಗುವ ಹಕ್ಕನ್ನು ಕಳೆದುಕೊಳ್ಳದ ಹಾಗೆ ಒಂದು ವೃತ್ತಿಯಿಂದ ಮತ್ತೊಂದು ವೃತ್ತಿಗೆ ಬದಲಾಯಿಸಿಕೊಳ್ಳುವುದು ಅಸಾಧ್ಯವಾದುದೇನೂ ಆಗಿರಲಿಲ್ಲ ಎನ್ನುವುದನ್ನು ಗಮನಿಸಲಾಗಿದೆ. ನೇಯ್ಗೆಯ ವೃತ್ತಿಯಲ್ಲಿ ಮಹಾರ್ ಹಾಗೂ ಚಮಾರ್ ಸೇರಿದಂತೆ ಅಶುದ್ಧ ಜಾತಿಗಳೂ ಸಹ ಇದ್ದವು. ಜನಗಣತಿಯ ಕಡೆ ನಾವು ಗಮನ ಹರಿಸಿದರೆ, ವಿಶೇಷವಾಗಿ 1901 ಜನಗಣತಿ, ಪ್ರತ್ಯೇಕ ಜಾತಿಗಳೆಂದು ಗುರುತಿಸಲಾದ ಗುಂಪುಗಳು, ಒಂದಕ್ಕಿಂತ ಹೆಚ್ಚು ವೃತ್ತಿಯಲ್ಲಿ ತೊಡಗಿರುವುದು ಕಂಡುಬರುತ್ತದೆ. ಈ ದೃಷ್ಟಿಯಿಂದ ರಸೆಲ್ನ ಈ ಕೆಳಗಿನ ಹೇಳಿಕೆ ಅತ್ಯಂತ ಉಪಯುಕ್ತವೆನಿಸುತ್ತದೆ. ಅವನು ಹೇಳುವಂತೆ: ಹಲವು ಜಾತಿಗಳು ಒಂದೇ ಬಗೆಯ ಸಾಂಪ್ರದಾಯಿಕ ವೃತ್ತಿಗಳನ್ನು ಅನುಸರಿಸುತ್ತಿವೆ; ಮಧ್ಯ ಪ್ರಾಂತ್ಯದ ಸುಮಾರು ನಲವತ್ತು ಜಾತಿಗಳನ್ನು ಕೃಷಿಕರು, ನೇಯ್ಗೆಯವರು, ಮತ್ತು ಮೀನುಗಾರರು ಎಂದೂ ಕೂಡ ವರ್ಗೀಕರಿಸಲಾಗಿದೆ." 1798ರಲ್ಲಿ ಕೋಲ್‌ಬ್ರೂಕ್ ಹೀಗೆ ಬರೆಯುತ್ತಾನೆ: "ದಿನಚರಿಗಳನ್ನು ಗಮನಿಸಿದಾಗ ಬ್ರಾಹ್ಮಣರೂ ಕೂಡ ಶೂದ್ರರು ಮಾಡುತ್ತಿದ್ದ ದೈಹಿಕ ಶ್ರಮದ ಕೆಲಸಗಳನ್ನೂ ಮಾಡುತ್ತಿದ್ದರು ಎನ್ನುವುದು ತಿಳಿಯುತ್ತದೆ. ಪ್ರತಿಯೊಂದು ಜಾತಿಯೂ ಅನತಿ ದೂರದಲ್ಲೇ ವಾಸಿಸುತ್ತಿರುವ ವ್ಯಕ್ತಿಗಳನ್ನೊಳಗೊಂಡ ಕ್ಲಬ್‌ಗಳು ಅಥವಾ ವಸತಿಗೃಹಗಳಾಗಿ ರೂಪುಕೊಂಡಿದ್ದವು ಮತ್ತು ಈ ಕ್ಲಬ್ ಅಥವಾ ವಸತಿ ಗೃಹಗಳು ನಿರ್ದಿಷ್ಟವಾದ ನಿಯಮಗಳು ಅಥವಾ ರೂಢಿಗಳು ಅಥವಾ ಉಪನಿಯಮಗಳಿಗೆ ಒಳಪಟ್ಟಿದ್ದವು ಎನ್ನುವುದು ನಮಗೆ ತಿಳಿದಿದೆ. ಆದರೆ ರಿಲಿಜಿಯಸ್ ಪೂರ್ವಾಗ್ರಹಗಳ ಆಧಾರವನ್ನು ಹೊಂದಿರದ ಕೆಲವು ನಿಬಂಧನೆಗಳು ಮತ್ತು ಮಿತಿಗಳು ಉಪನಿಯಮಗಳಲ್ಲಿದ್ದರೂ ಕೂಡ ಪ್ರತಿ ಬುಡಕಟ್ಟಿಗೆ ನಿರ್ದಿಷ್ಟ ಪಡಿಸಲಾದ ಉದ್ಯೋಗವು ಆದ್ಯತೆಯನ್ನು ಹೊಂದಿತ್ತು ಎನ್ನುವುದು ಸಾಮಾನ್ಯವಾಗಿ ಅನ್ವಯವಾಗುತ್ತಿದ್ದ ನಿಯಮವಾಗಿತ್ತು. ಕೆಲವು ಅಪವಾದಗಳನ್ನು ಹೊರತುಪಡಿಸಿದರೆ ಪ್ರತಿಯೊಂದು ವೃತ್ತಿಯೂ ಎಲ್ಲ ಬಗೆಯ ವ್ಯಕ್ತಿಗಳಿಗೂ ಮುಕ್ತವಾಗಿತ್ತು." "ಪೌರೋಹಿತ್ಯವನ್ನು ಹೊರತುಪಡಿಸಿದರೆ, ವ್ಯಕ್ತಿಯು ತೊಡಗಿಕೊಳ್ಳುತ್ತಿದ್ದ ಬದುಕಿನ ಮೇಲೆ ಜಾತಿಯು ಯಾವುದೇ ಪರಿಣಾಮವನ್ನೂ ಬೀರುತ್ತಿರಲಿಲ್ಲ" ಎಂದು ಇರ್ವಿನ್ ಹೇಳುವಾಗ ಖಂಡಿತವಾಗಿಯೂ ಅವನ ಹೇಳಿಕೆ ಉತ್ಪ್ರೇಕ್ಷೆಯಿಂದ ಕೂಡಿತ್ತು. ಬೈನ್ಸ್‌ನ ಈ ಮುಂದಿನ ಹೇಳಿಕೆಯು ನಿಜಸ್ಥಿತಿಯನ್ನು ತಿಳಿಸುತ್ತದೆ, "ಅದಕ್ಕೆ (ಜಾತಿಗೆ) ಸಾಮಾನ್ಯವಾಗಿದ್ದ ಉದ್ಯೋಗವು, ಮತ್ತೆ, ಸಾಂಪ್ರದಾಯಿಕವಾದುದಾಗಿತ್ತು, ಮತ್ತು ಯಾವುದೇ ರೀತಿಯಿಂದಲೂ

ಅದು ಇಂದು ಗುಂಪಿನ ಬದುಕನ್ನು ಸಾಗಿಸಲು ಅದರ ಬಹಳಷ್ಟು ಸದಸ್ಯರುಗಳು ಅದನ್ನೇ ಆಶ್ರಯಿಸಬೇಕಾದ ಅಗತ್ಯವಂತೂ ಇರಲಿಲ್ಲ."

(ಊ) ವಿವಾಹದ ಮೇಲಿನ ನಿರ್ಬಂಧಗಳು: ನಾನು ಈ ಮೇಲೆ ಲಕ್ಷಣಗಳನ್ನು ಗುರುತಿಸಲು ಯತ್ನಿಸಿದ ಬಹಳಷ್ಟು ಗುಂಪುಗಳು ತನ್ನ ಗುಂಪಿನ ಹೊರಗೆ ವಿವಾಹವಾಗುವುದಕ್ಕೆ ಪ್ರತಿಯೊಂದು ಗುಂಪಿಗೂ ಇರುವ ನಿಷೇಧವನ್ನು ಆಧರಿಸಿ ಮತ್ತಷ್ಟು ಉಪಗುಂಪುಗಳಾಗಿ ವಿಭಜಿಸಲ್ಪಟ್ಟಿವೆ. ಉಪಜಾತಿ ಎಂದು ಪ್ರಸಿದ್ಧವಾಗಿರುವ ಇದರಲ್ಲಿನ ಪ್ರತಿ ಗುಂಪೂ ಸಹ ಅಂತರ್ವಿವಾಹಕ್ಕೆ ಸೀಮಿತವಾದ ಗುಂಪಾಗಿದೆ. ಜಾತಿಯೊಳಗಿನ ಅಂತರ್ವಿವಾಹ ತತ್ವ ಎಷ್ಟೊಂದು ಪ್ರಬಲವಾಗಿದೆಯೆಂದರೆ ಒಬ್ಬ ಪ್ರಮುಖ ಸಮಾಜಶಾಸ್ತ್ರಜ್ಞನ ಪ್ರಕಾರ "ಅಂತರ್ವಿವಾಹವು ಜಾತಿ ವ್ಯವಸ್ಥೆಯ ಮೂಲ ಸತ್ವವಾಗಿದೆ." ಆದರೆ ಸಾಮಾನ್ಯವಾಗಿರುವ ಜಾತಿಯೊಳಗಿನ ವಿವಾಹದ ಈ ನಿಯಮಕ್ಕೆ ಜಾತಿಯ ಹೊರಗೆ ವಿವಾಹವಾಗುವ ಕೆಲವು ಆಚರಣೆಗಳಿಂದಾಗಿ ಕೆಲವು ಅಪವಾದಗಳಿವೆ. ಪಂಜಾಬಿನ ಕೆಲವು ಭಾಗಗಳಲ್ಲಿ, ವಿಶೇಷವಾಗಿ ಗುಡ್ಡಗಾಡು ಪ್ರದೇಶದಲ್ಲಿ, ಮೇಲ್ಜಾತಿಯ ಯುವಕನು ಕೆಳಜಾತಿಯ ಹುಡುಗಿಯನ್ನು ಪತ್ನಿಯಾಗಿ ಸ್ವೀಕರಿಸಬಹುದಾಗಿದೆ. ಹಾಗೆಯೆ ಮಲಬಾರಿನಲ್ಲಿ ನಂಬೂದರಿಯ ಕೊನೆಯ ಮಗ ಮತ್ತು ಇತರ ಬ್ರಾಹ್ಮಣರು ಮಾತೆಯರಿಗೆ ಹಕ್ಕು ಇರುವ ಕ್ಷತ್ರಿಯ ಮತ್ತು ನಾಯರ್ ಸ್ತ್ರೀಯರನ್ನು ಸಂಗತಿಯಾಗಿ ಮಾಡಿಕೊಳ್ಳಬಹುದಾಗಿದೆ. ಜಾತಿಯ ಹೊರಗಿನ ವಿವಾಹ ಪದ್ಧತಿಯ ಈ ಉದಾಹರಣೆಗಳನ್ನು ಹರತುಪಡಿಸಿದರೆ ಪ್ರತಿಯೊಂದು ಗುಂಪು ವೈವಾಹಿಕ ಸಂಬಂಧವನ್ನು ತನ್ನ ಮಿತಿಯೊಳಗೆ ಏರ್ಪಡಿಸಿಕೊಳ್ಳಬೇಕು. ಈ ಆಚರಣೆಯ ಹೊರಗೆ ಅಂತರ್ಜಾತಿ ವಿವಾಹಕ್ಕೆ ಅನುಮತಿಯಿರುವ ಮತ್ತೊಂದು ಉದಾಹರಣೆಯೆಂದರೆ ಮಲಬಾರಿನಲ್ಲಿರುವ ಕರಕುಶಲ ಜಾತಿಗಳು. ಈ ನಿಯಮವನ್ನು ಮೀರಿದ ವ್ಯಕ್ತಿಯನ್ನು ಉಪಜಾತಿಯಿಂದ ಹೊರಹಾಕಲಾಗುತ್ತದೆ ಮತ್ತು ಇತರ ಯಾವುದೇ ಗೌರವಾನ್ವಿತ ಜಾತಿಯು ಅವನನ್ನು ಸೇರಿಸಿಕೊಳ್ಳುತ್ತದೆ ಎನ್ನುವುದು ಅನುಮಾನಾಸ್ಪದವಾಗಿದೆ. ಮರಾಠ ಪ್ರದೇಶದಿಂದ ಉದಾಹರಣೆಯನ್ನು ಕೊಡುವುದಾದರೆ ಕೊಂಕಣಸ್ಥ ಬ್ರಾಹ್ಮಣನು ಕೊಂಕಣಸ್ಥ ಬ್ರಾಹ್ಮಣ ಕುಟುಂಬದ ಹುಡುಗಿಯನ್ನೆ ಮದುವೆಯಾಗಬೇಕು, ಅದೇ ರೀತಿ ಕರ್ಹದಾ ಬ್ರಾಹ್ಮಣನು ತನ್ನ ಕರ್ಹದಾ ಬ್ರಾಹ್ಮಣರಲ್ಲೆ ತನ್ನ ಸಂಗಾತಿಯನ್ನು ಹುಡುಕಬೇಕು. ಒಟ್ಟಾರೆಯಾಗಿ ವಿವಾಹವು ತನ್ನದೇ ಒಂದು ಸ್ಪಷ್ಟವಾಗಿ ಗುರುತಿಸಿಕೊಳ್ಳಬಹುದಾದ ಗುಂಪಿನ ಒಳಗೇ ನಡೆಯಬೇಕು. ಈ ನಿಯಮವನ್ನು ಉಲ್ಲಂಘಿಸಿದರೆ ಅಪರಾಧವೆಸಗಿದ ಪಕ್ಷವು ತನ್ನ ಗುಂಪಿನಿಂದ ಉಚ್ಚಾಟಿತಗೊಳ್ಳುವ ಶಿಕ್ಷೆಗೊಳಗಾಗಬೇಕು. ಗುಜರಾತಿನಲ್ಲಿ ವೈವಾಹಿಕ ಸಂಬಂಧವೇರ್ಪಡುವ ಘಟಕವು ಮರಾಠ ಪ್ರದೇಶದಲ್ಲಿರುವ ಉಪಜಾತಿಗಿಂತ ಚಿಕ್ಕದಾಗಿರುತ್ತದೆ. ವ್ಯಾಪಾರಿ ಗುಂಪಾದ ಬನಿಯಾಗಳು, ಉದಾಹರಣೆಗೆ, ಕೇವಲ ಶ್ರೀಮಾಲಿ, ಪೊರ್ವಾಲ್, ಮೊದ್ ಮುಂತಾದ ವಿಭಜನೆಗಳು ಮಾತ್ರವಲ್ಲದೆ ದಾಸ ಪೂರ್ವಾಲ್ ಮತ್ತು ವಿಸ ಪೂರ್ವಾಲ್ ಎನ್ನುವ ಅವುಗಳೊಳಗೆ ಮತ್ತಷ್ಟು ಉಪವಿಭಜನೆಗಳಿವೆ. ಇದಷ್ಟೆ ಅಲ್ಲ ದಾಸರುಗಳಿಗೆ ಅವರು ಬಾಂಬೆ ಅಥವಾ ಸೂರತ್ ಇವುಗಳಲ್ಲಿ ಯಾವ ಪ್ರದೇಶಕ್ಕೆ ಸೇರಿರುತ್ತಾರೊ ಆಯಾ ಪ್ರದೇಶದೊಳಗೆ ವೈವಾಹಿಕ ಸಂಬಂಧ ಮಾಡಿಕೊಳ್ಳಬೇಕಾಗುತ್ತದೆ. ಅಷ್ಟು ವಿಪರೀತವಾಗಿ ಗುಂಪುಗಳು ವಿಭಜನೆಯಾಗಿರುವ ಸಂದರ್ಭದಲ್ಲಿ ಅಂತರ್ವಿವಾಹದ ನಿಯಮಗಳನ್ನು ಉಲ್ಲಂಘಿಸಿದರೆ ಅವರಿಗೆ ಗುಂಪಿನಿಂದ ಉಚ್ಚಾಟಿಸುವ ಶಿಕ್ಷೆಯನ್ನು ನೀಡದೆ ಅಪಮಾನಕ್ಕೊಳಗಾದ ಗುಂಪನ್ನು ಅವರು ತೃಪ್ತಿಪಡಿಸಬೇಕಾಗುತ್ತದೆ.

ಅಂತರ್ವಿವಾಹವನ್ನು ಜಾತಿಯ ಪ್ರಮುಖ ಲಕ್ಷಣವೆಂದು ಗುರುತಿಸುವುದು ಉಪ ಜಾತಿಗಳು ಎಂದು ಗುರುತಿಸಲಾದ ಗುಂಪಗಳೇ ನಿಜವಾದ ಜಾತಿಗಳು ಎಂದು ತಿಳಿಯಬೇಕಾಗುತ್ತದೆ. ಹೀಗೆ ಉಪ ಜಾತಿಗಳನ್ನು ಜಾತಿಗಳ ಸ್ಥಾನಕ್ಕೆ ಉನ್ನತೀಕರಿಸುವುದಕ್ಕೆ ವಿರುದ್ಧವಾಗಿ ಗೈಟ್ ಎರಡು

ಕಾರಣಗಳನ್ನು ನೀಡುತ್ತಾನೆ, ಮೊದಲನೆಯದಾಗಿ, "ಈ ವಿಷಯದ ಬಗ್ಗೆ ಸ್ಥಳೀಯರಿಗಿರುವ ಭಾವನೆಗೆ ಇದು ವಿರುದ್ಧವಾದುದು" , ಮತ್ತು "ಗಾಬರಿಯಾಗುವಷ್ಟು ಜಾತಿಗಳು ದ್ವಿಗುಣಗೊಳ್ಳುವುದರಿಂದ ವಾಸ್ತವ ಆಚರಣೆಗೆ ಇದು ಸೂಕ್ತವಾಗಿರುವುದಿಲ್ಲ." ಎರಡನೆಯ ಆಕ್ಷೇಪವು ಆಡಳಿತಕ್ಕೆ ಸಂಬಂಧಿಸಿದ್ದಾಗಿರುವುದರಿಂದ ಅದನ್ನು ನಾವು ಕಡೆಗಣಿಸಬಹುದಾಗಿದೆ. ಉಪಜಾತಿಯನ್ನು ಜಾತಿಯನ್ನಾಗಿ ಪರಿಗಣಿಸುವುದರ ಬಗ್ಗೆ ಭಾರತೀಯರ ಭಾವನೆಗೆ ಸಂಬಂಧಿಸಿದಂತೆ ಇದು ಸಮಸ್ಯೆಯ ಒಂದು ಮುಖವನ್ನು ಮಾತ್ರ ಪ್ರತಿಬಿಂಬಿಸುತ್ತದೆ ಎಂದು ಹೇಳಬಹುದು. ಮರಾಠ ಪ್ರದೇಶಕ್ಕೆ ಸೀಮಿತಗೊಳಿಸಿಕೊಂಡು ಹೇಳುವುದಾದರೆ, ಹೊರಗಿನವರಿಗೆ ಒಬ್ಬ ಸಾರಸ್ವತ ಬ್ರಾಹ್ಮಣನು ಸಾರಸ್ವತ ಬ್ರಾಹ್ಮಣನಾಗಿ ಕಾಣಿಸುತ್ತಾನೆ, ಸಾರಸ್ವತನೊಬ್ಬನಿಗೆ ಅವನು ಶೆಣ್ವಿಯೊ ಅಥವಾ ಪೆಡ್ನೆಕರ್ ಆಗಿಯೋ ಕಾಣಿಸಿಕೊಳ್ಳುತ್ತಾನೆ. ಸಾಮಾನ್ಯೀಕರಿಸಿ ಹೇಳುವುದಾದರೆ ಒಟ್ಟಾರೆ ಸಮಾಜವು ಜಾತಿಯನ್ನು ಗುರುತಿಸಿದರೆ ಆ ಜಾತಿಗೊಳಗಿನವರಿಗೆ ಮತ್ತು ವ್ಯಕ್ತಿಗೆ ಉಪಜಾತಿ ಮುಖ್ಯವಾಗುತ್ತದೆ. ಭಾರತೀಯ ವ್ಯವಸ್ಥೆಯ ಪ್ರಮುಖ ಲಕ್ಷಣವಾಗಿರುವ ಇತರರ ಬಗೆಗಿನ ಒಂದು ಬಗೆಯ ನಿರ್ಲಕ್ಷ್ಯ ಈ ಧೋರಣೆ ಬೆಳೆದು ಬರುವುದಕ್ಕೆ ಕಾರಣವಾಗಿದೆ. ಬ್ರಾಹ್ಮಣನಿಗೆ ಬಹಳಷ್ಟು ಇತರ – ಅವರ ಸ್ಥಾನಮಾನ ಉನ್ನತವಾಗಿರಲಿ ಅಥವಾ ಕೀಳಾಗಿರಲಿ – ಜನರು ಶೂದ್ರರಾಗುತ್ತಾರೆ, ಮತ್ತು ಸಾಂಸ್ಕೃತಿಕವಾಗಿ ಬ್ರಾಹ್ಮಣರೊಂದಿಗೆ ಸರಿಸಮಾನರಾಗಿರುವ ಇತರ ಎರಡು ಅಥವಾ ಮೂರು ಮೇಲ್ಜಾತಿಗಳಿಗೆ ಉಳಿದ ಜನರೆಲ್ಲರೂ ದೈಹಿಕ ಶ್ರಮದಿಂದ ಬದುಕನ್ನು ಸಾಗಿಸುವವರಿಗೆ ಸಾಮಾನ್ಯವಾಗಿ ಕರೆಯುವಂತೆ ಕುಲ್ವಾಡಿಗಳು ಅಥವಾ ಶೂದ್ರರು. ಉನ್ನತ ಜಾತಿಗಳನ್ನು ಒಟ್ಟಾಗಿ ಸೇರಿಸಿ ಬಿಹಾರದಲ್ಲಿ ಅಶ್ರಫಿನ್ ಎಂದೂ ಬಂಗಾಳದಲ್ಲಿ ಭದ್ರಲೋಕ್ ಎಂದೂ ಮಹಾರಾಷ್ಟ್ರದಲ್ಲಿ ಪಾಂದಾರ್ ಪೇಶ್ವೆಗಳೆಂದೂ ಕರೆಯುತ್ತಾರೆ. ಅಲ್ಲದೆ, ಭಾರತೀಯರಲ್ಲಿರುವ ಕೆಲವು ಭಾವನೆಗಳನ್ನು ನಾವು ಪರಿಗಣಿಸಿ ವಿಶ್ಲೇಷಣೆ ಮಾಡುವುದಾದರೆ ಆಗ ಈ ಕುರಿತು ಇರುವ ಸಾಂಪ್ರಾದಾಯಿಕ ಸಿದ್ಧಾಂತದ ಪ್ರಕಾರ ಈ ಯುಗದಲ್ಲಿ ಎರಡು ಅಥವಾ ಹೆಚ್ಚೆಂದರೆ ಮೂರು ಜಾತಿಗಳಿವೆ, ಯಾವುದೇ ಪ್ರಧಾನವಾದ ಭಾಷಾವಾರು ಪ್ರಾಂತ್ಯದ ಜನರನ್ನು ನಾವು ಎರಡು ಜಾತಿಗಳಾಗಿ ಅಂದರೆ ಬ್ರಾಹ್ಮಣರು ಮತ್ತು ಶೂದ್ರರು ಎಂದು ವಿಂಗಡಿಸಬೇಕಾಗುತ್ತದೆ, ಅಥವಾ, ಹೆಚ್ಚೆಂದರೆ ಕಷ್ಟಪಟ್ಟು ಕ್ಷತ್ರಿಯರಿಗೂ ಒಂದು ಸ್ಥಾನ ಸಿಕ್ಕಲ್ಲಿ, ಮೂರು ಜಾತಿಗಳಾಗಿ ಗುರುತಿಸಬಹುದಾಗಿದೆ. ಗ್ರೈಟ್ ಒಳಗೊಂಡಂತೆ ಜಾತಿಯನ್ನು ಕುರಿತಂತೆ ಐಾವ ವೈಜ್ಞಾನಿಕ ವಿದ್ಯಾರ್ಥಿಯೂ ಸಹ ಈ ವಿಷಯದ ಬಗ್ಗೆ ಭಾರತೀಯರ ಅಭಿಪ್ರಾಯವನ್ನು ಪರಿಗಣಿಸಿಲ್ಲ ಎನ್ನುವುದು ಸ್ಪಷ್ಟ. ಈ ಸಂಸ್ಥೆಯ ಸರಿಯಾದ ಸಮಾಜಶಾಸ್ತ್ರೀಯ ಚಿತ್ರಣ ಸಿಗಬೇಕಾದರೆ ಉಪಜಾತಿಗಳನ್ನು ನಿಜವಾದ ಜಾತಿಗಳೆಂದೆ ಗುರುತಿಸಬೇಕಾಗುತ್ತದೆ ಎನ್ನುವುದು ಇದಕ್ಕೆ ಇರುವ ಸರಳವಾದ ಕಾರಣವಾಗಿದೆ.

ಇದುವರೆಗೆ ಪರಿಗಣಿಸಲಾದ ಜಾತಿ ಸಮಾಜದ ಲಕ್ಷಣಗಳಲ್ಲಿ ಮೂರು ಲಕ್ಷಣಗಳು ಒಟ್ಟಾರೆಯಾಗಿ ಜಾತಿಗೆ ಸಂಬಂಧಿಸಿದಂತೆ ಇವೆ; ಯಾವುದೇ ಉಪಜಾತಿಯ ಸ್ಥಾನಮಾನವು ಜಾತಿಯ ಸ್ಥಾನಮಾನವನ್ನು ಅವಲಂಬಿಸಿದೆ. ವಿವಿಧ ನಾಗರಿಕ ಮತ್ತು ರಿಲಿಜಿಯಸ್ ಹಕ್ಕುಗಳು ಮತ್ತು ಅನನುಕೂಲತೆಗಳು ಆ ಮೂಲದಿಂದಲೇ ಬರುತ್ತವೆ. ಜಾತಿಯ ಸ್ವರೂಪವು ಸಾಂಪ್ರದಾಯಿಕ ಉದ್ಯೋಗವನ್ನು ನಿರ್ಧರಿಸುತ್ತದೆ. ಸಾಮಾಜಿಕ ಬದುಕಿನ ಮೇಲೆ ಪರಿಣಾಮ ಬೀರುವ ಒಂದು ಗುಂಪಿನ ಇತರ ಮೂರು ಭೌತಿಕ ಲಕ್ಷಣಗಳಾದ ಸಾಮುದಾಯಿಕ ಬದುಕನ್ನು ನಿಯಂತ್ರಿಸುವ, ಏನನ್ನು ತಿನ್ನಬೇಕು ಅಥವಾ ತಿನ್ನಬಾರದು ಎಂದು ಸೂಚಿಸುವ, ಸಾಮಾಜಿಕ ವ್ಯವಹಾರವನ್ನು ಮತ್ತು ಅಂತರ್ವಿವಾಹವನ್ನು ಸೂಚಿಸುವ ವಿಷಯಗಳು ಉಪಜಾತಿಗೆ ಸೇರುತ್ತವೆ. ಗುಂಪಿನ ನೈತಿಕ ಹಾಗೂ ಆರ್ಥಿಕ ನಿಯಮಗಳನ್ನು ಜಾರಿಗೊಳಿಸುವ ಪಂಚಾಯತ್ ಅಥವಾ ಜಾತಿ ಸಮಿತಿಗಳಿಗೆ ಸಂಬಂಧಿಸಿದಂತೆ ಉಪಜಾತಿಗಳು ತಮ್ಮದೇ ಆದ

ಸಮಿತಿಗಳನ್ನು ಹೊಂದಿರುತ್ತವೆ. ಪಂಜಾಬಿನಲ್ಲಿ ಇದು ಶ್ರಮಜೀವಿಗಳು ಮತ್ತು ಕರಕುಶಲ ಜಾತಿಗಳನ್ನು ಹೊರತುಪಡಿಸಿ ಇತರ ಎಲ್ಲ ಜಾತಿಗಳಿಗೂ ಅನ್ವಯಿಸುತ್ತದೆ. "ಉಪವಿಭಜನೆಗಳನ್ನು ಸರಿಯಾಗಿ ವ್ಯಾಖ್ಯಾನಿಸದಿದ್ದಲ್ಲಿ ಅಥವಾ ಒಂದು ಜಾತಿಯ ಜನರ ಸಂಖ್ಯೆ ಅತ್ಯಂತ ಕಡಿಮೆ ಇದ್ದಲ್ಲಿ ಅಂತಹ ಕಡೆ ಇಡಿ ಜಾತಿಗೆ ಒಂದು ಸಮಿತಿ ಇರುತ್ತದೆ." ಬಂಗಾಳದ ಉಪಜಾತಿಯ ಈ ಮುಂದಿನ ವಿವರಣೆಯು ನಾನು ಅದಕ್ಕೆ ವಿಶಿಷ್ಟವಾದುದು ಎಂದು ಹೇಳಿದ ಕಾರ್ಯವನ್ನು ತೋರಿಸುತ್ತದೆ. "ಹೆಚ್ಚು ಕಡಿಮೆ ಎಲ್ಲ ಜಾತಿಯೂ ಸಹ ತಮ್ಮೊಳಗೆ ವಿವಾಹವೇರ್ಪಡುವ ಹಲವಾರು ಸಣ್ಣ ಗುಂಪುಗಳಾಗಿ ವಿಭಜಿತಗೊಂಡಿವೆ. ಸಾಮಾನ್ಯವಾಗಿ ಈ ಗುಂಪುಗಳು ಒಟ್ಟಾಗಿ ಊಟ ಮಾಡುವುದಿಲ್ಲ ಮತ್ತು ಸಾಮಾನ್ಯವಾಗಿ ಅವರು ನೀರನ್ನೂ ಸಹ ಪರಸ್ಪರರಿಂದ ಸ್ವೀಕರಿಸುವುದಿಲ್ಲ ಅಥವಾ ಒಂದೇ ಹುಕ್ಕಾವನ್ನು ಸೇದುವುದಿಲ್ಲ.. . . .ಈ ಅಂತರ್ವಿವಾಹ ಗುಂಪುಗಳು ಸಾಮಾನ್ಯವಾಗಿ ಉಪಜಾತಿಗಳು ಎಂದು ಗುರುತಿಸಲ್ಪಟ್ಟಿವೆ. ಪ್ರತಿಯೊಂದು ಉಪಜಾತಿಯೂ ಸಹ ಮತ್ತೊಂದನ್ನು ಅವಲಂಬಿಸದೆ ಸ್ವತಂತ್ರವಾಗಿ ತನ್ನ ವ್ಯವಹಾರವನ್ನು ನೋಡಿಕೊಳ್ಳುತ್ತದೆ. ಕೆಳಜಾತಿಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ ಪ್ರತಿಯೊಂದು ಜಾತಿಯಲ್ಲೂ ಎಲ್ಲ ಸಾಮಾಜಿಕ ಪ್ರಶ್ನೆಗಳನ್ನು ಬಗೆಹರಿಸುವ ಪಂಚಾಯತಿ ಅಥವಾ ಸ್ಥಾಯಿ ಸಮಿತಿಗಳಿವೆ." ಉತ್ತರ ಪ್ರದೇಶದಲ್ಲಿ ಉಪಜಾತಿಯು ಸಾಮಾಜಿಕ ಸಂಘಟನೆಗಳ ಘಟಕಗಳಾಗಿವೆ, ಮತ್ತು ಹಾಗಿರುವ ಮೂಲಕ ಅವು ತಮ್ಮ ವ್ಯವಹಾರಗಳನ್ನು ನೋಡಿಕೊಳ್ಳಲು ಇತರ ಜಾತಿಗಳ ಅದೇ ತರದ ಸಮಿತಿಗಳಿಗೆ ಹೊರತಾದ ತಮ್ಮದೇ ಆದ ಸಮಿತಿಗಳನ್ನು ಹೊಂದಿವೆ. ಅಷ್ಟಲ್ಲದೆ ಸಹ ಭೋಜನ ಮತ್ತು ಸಹಪಾನೀಯ ಆಚರಣೆಯು ಅಂತರ್ವಿವಾಹದ ನಿಬಂಧನೆಗಳಿರುವ ಗುಂಪಿಗೆ ಸೀಮಿತವಾಗಿರುತ್ತದೆ. ಮಧ್ಯ ಪ್ರಾಂತ್ಯಗಳ ಬಗ್ಗೆ ರಸೆಲ್ ಹೀಗೆನ್ನುತ್ತಾನೆ : "ಈ ಅಂತರ್ವಿವಾಹ ಗುಂಪು ಅಥವಾ ಉಪಜಾತಿಯು ವ್ಯವಸ್ಥೆಯ ನಿಜವಾದ ಘಟಕ ಮತ್ತು ಭಾರತೀಯ ಸಮಾಜದ ಹೊರಪದರದ ಆಧಾರವಾಗಿದೆ." ವ್ಯಕ್ತಿಯ ಜಾತಿಯ ಬಗ್ಗೆ ಗೊತ್ತಿರುವಷ್ಟು ಈ ಸಣ್ಣ ಗುಂಪಿನ ಬಗ್ಗೆ ಗೊತ್ತಿಲ್ಲದಿದ್ದರೂ ಕೂಡ "ವಿವಾಹದಂತಹ ಸಮಾರಂಭಗಳಲ್ಲಿ ಸಮುದಾಯ ಭೋಜನದಲ್ಲಿ, ಶವಸಂಸ್ಕಾರದಲ್ಲಿ, ಮತ್ತು ಜಾತಿ (ಉಪಜಾತಿ) ಪಂಚಾಯತಿ ಸಭೆಗಳಲ್ಲಿ" ಭಾಗವಹಿಸುವವರು ಇಂತಹ ಉಪಜಾತಿಯ ಸದಸ್ಯರೆ ಆಗಿರುತ್ತಾರೆ. ಇಂತಹ ಸಣ್ಣ ಅಂತರ್ವಿವಾಹದ ನಿಬಂಧನೆಯುಳ್ಳ ಉಪವಿಭಾಗಗಳು "ಎಲ್ಲ ಸಾಮಾಜಿಕ ಉದ್ದೇಶಗಳ ದೃಷ್ಟಿಯಿಂದ ನಿಜವಾದ ಜಾತಿಗಳಾಗಿರುತ್ತವೆ" ಎನ್ನುವ ಮದ್ರಾಸ್‌ನ ಜನಗಣತಿ ನಿರ್ವಾಹಕನ ಹೇಳಿಕೆಯನ್ನು ಸೇಲಂ ಜಿಲ್ಲೆಗೆ ಸಂಬಂಧಿಸಿದಂತೆ ಎಫ್.ಜೆ.ರಿಚರ್ಡ್‌ನ ಈ ಮುಂದಿನ ಹೇಳಿಕೆಯು ಪುರಸ್ಕರಿಸುತ್ತದೆ: "ಅಂತರ್ವಿವಾಹ ನಿಬಂಧನೆಯುಳ್ಳ ಗುಂಪು ಅಥವಾ ಉಪಜಾತಿಯು ಹಿಂದೂ ಸಮಾಜದ ಘಟಕವಾಗಿದೆ." ಶೆರ್ರಿಂಗ್ನ ಹಿಂದೂಸ್ಥಾನಿ ಜಾತಿಯ ಉಪಜಾತಿಯ ಚಿತ್ರಣವು ಇದನ್ನು ವಿವರಿಸುತ್ತದೆ. ಹಿಂದೂಸ್ಥಾನದ ಬಾರ್ಹೈ ಅಥವಾ ಬಡಗಿ ಜಾತಿಯ ಉಪಜಾತಿಗಳು ಪರಸ್ಪರ ಎಷ್ಟು ಭಿನ್ನವಾಗಿರುತ್ತವೆಂದರೆ ಅವುಗಳ ನಡುವೆ ವೈವಾಹಿಕ, ಸಹಭೋಜನ ಒಟ್ಟಾಗಿ ಹುಕ್ಕಾ ಸೇದುವಂತಹ ಯಾವುದೇ ತರಹದ ನೇರವಾದ ಸಾಮಾಜಿಕ ಸಂವಹನವಿರುವುದಿಲ್ಲ." ಕೆಲವು ಉಪಜಾತಿಗಳು ಅವುಗಳ ಸಾಂಸ್ಕೃತಿಕ ಆಚರಣೆಗಳಿಗೆ ಸಂಬಂಧಿಸಿದಂತೆ ಎಷ್ಟು ವಿಶಿಷ್ಟವಾಗಿವೆಯೆಂದರೆ, ಉದಾಹರಣೆಗೆ ವೆಲ್ಲಾಳ ಜಾತಿಯ ವಿವಾಹ ವಿಧಿಗಳ ಮತ್ತು ಇತರ ಸಂಪ್ರದಾಯಗಳ ಬಗ್ಗೆ ಆ ಜಾತಿಯ ಎಲ್ಲ ಉಪವಿಭಾಗಗಳಿಗೆ ಅನ್ವಯಿಸುವಂತಹ ಸಾಮಾನ್ಯವಾದ ವಿವರಣೆಯನ್ನು ಕೊಡಲಾಗುವುದಿಲ್ಲ. ಅವುಗಳಲ್ಲಿ ಕೆಲವು ವಿಚ್ಛೇದನದ ಸ್ವಾತಂತ್ರ್ಯ ಮತ್ತು ಪುನರ್ವಿವಾಹವನ್ನು (ಬಹುಪತಿತ್ವವನ್ನೂ ಕೂಡ) ಗುರುತಿಸುತ್ತವೆಯಾದರೆ ಮತ್ತೆ ಕೆಲವು

ಬ್ರಾಹ್ಮಣ ವಿಧಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತವೆ. "ಒಂದು ನಿಯಮವಾಗಿ ಪರಸ್ಪರ ವಿವಾಹದ ನಿಷೇಧದ ಕಾಠಿಣ್ಯ ವಿಭಿನ್ನ ಜಾತಿಗಳ ನಡುವೆ ಇದ್ದಷ್ಟು ವಿಭಿನ್ನ ಉಪಜಾತಿಗಳ ನಡುವೆ ಇರುವುದಿಲ್ಲ. ನಿಯಮವನ್ನು ಉಲ್ಲಂಘಿಸಿದಾಗ ಅದಕ್ಕೆ ಸಾಮಾನ್ಯವಾಗಿ ಉಚ್ಚಾಟನೆಯ ಶಿಕ್ಷೆ ಇರುವುದಿಲ್ಲ. ಬದಲಿಗೆ ಕೆಲವು ತರಹದ ಪ್ರಾಯಶ್ಚಿತ ಮಾಡಿಕೊಳ್ಳಬೇಕಾಗುತ್ತದೆ. ಅದರ ನಂತರ ಉಪಜಾತಿಗಳಲ್ಲಿ ಉನ್ನತ ಸ್ಥಾನವನ್ನು ಹೊಂದಿರುವ ಜಾತಿಗೆ ಸೇರಿದ ಪೋಷಕರು ಕೆಳಗಿನ ಉಪಜಾತಿಯ ಸ್ಥಾನಕ್ಕೆ ಬರುತ್ತಾರೆ." ಗೈಟ್‌ನ ಈ ಹೇಳಿಕೆಯು ಉಪಜಾತಿಗಳನ್ನು ಜಾತಿಗೆ ಅಧೀನವಾದುಗಳೆಂದು ಏಕೆ ತೀರ್ಮಾನಿಸಬೇಕಾಗುತ್ತದೆ ಎನ್ನುವುದಕ್ಕೆ ಸೂಕ್ತ ಕಾರಣವನ್ನು ನೀಡುತ್ತದೆ. ಉತ್ತರ ಪ್ರದೇಶದಲ್ಲಿ "ಉಪಜಾತಿಗಳಲ್ಲಿ ಅಂತರ್ವಿವಾಹದ ನಿಯಮದ ಉಲ್ಲಂಘನೆಗೆ ಶಿಕ್ಷೆಯು ಜಾತಿಯೊಳಗೆ ನಡೆಯುವ ಅಂತರ್ವಿವಾಹದ ಉಲ್ಲಂಘನೆಗೆ ಸಮನಾದ ಶಿಕ್ಷೆಯನ್ನು ನೀಡಲಾಗುತ್ತದೆ" ಎನ್ನುವುದನ್ನು ಇಲ್ಲಿ ಹೇಳಬೇಕಾಗುತ್ತದೆ. ಉಪಜಾತಿಯ ಸಹಭೋಜನದ ನಿಯಮಗಳ ಅತಿಕ್ರಮಣದ ಶಿಕ್ಷೆಯು ಬೇರೆ ಬೇರೆ ಜಾತಿಗಳಲ್ಲಿ ಬೇರೆ ಬೇರೆಯಾಗಿದ್ದರೂ ಕೂಡ ಸಾಮಾನ್ಯವಾಗಿ ಜಾತಿಗಳ ಮತ್ತು ಉಪಜಾತಿಗಳ ಸಹಭೋಜನದ ನಿಯಮಗಳು ಒಂದೆ ಬಗೆಯದಾಗಿರುತ್ತವೆ. ಹಾಗಾಗಿ, ಜಾತಿ ಸಮಾಜವನ್ನು ರಚಿಸುವ ಗುಂಪುಗಳಲ್ಲಿನ ಪ್ರತಿಯೊಂದರಲ್ಲೂ ಅಂತರ್ವಿವಾಹವು ಅದರ ಪ್ರಮುಖ ಲಕ್ಷಣವಾಗಿದೆ ಎಂದು ಪರಿಗಣಿಸುವುದು ಸೂಕ್ತವಾಗಿದೆ.

ಇಲ್ಲಿಯವರೆಗೆ ನಾನು ಬ್ರಾಹ್ಮಣರು ತುಟ್ಟತುದಿಯಲ್ಲಿದ್ದ ಒಂದು ವ್ಯವಸ್ಥೆಯಲ್ಲಿ ಸರಪಳಿಯ ಹಾಗೆ ಒಟ್ಟಾಗಿ ಹಿಡಿದಿಡಲ್ಪಟ್ಟಿದ್ದ ಜಾತಿ ಸಮಾಜದಲ್ಲಿರುವ ಗುಂಪುಗಳ ನಡುವಿನ ವಿಭಿನ್ನ ಸ್ವರೂಪವನ್ನು ಪರಿಶೀಲಿಸಿದ್ದೇನೆ. ಈ ಗುಂಪುಗಳಲ್ಲಿನ ಜಾತಿ ಅಥವಾ ಉಪಜಾತಿ ಎಂದು ಗುರುತಿಸಲ್ಪಡುವ ಪ್ರತಿಯೊಂದಕ್ಕೂ, ಅದು ಮುಖ್ಯವಾದುದಾಗಿರಲಿ ಅಥವಾ ಅಮುಖ್ಯವಾದುದಾಗಿರಲಿ, ಒಂದು ಹೆಸರಿದೆ. ಒಂದೇ ಹೆಸರಿನ ಯಾವುದಾದರೂ ಒಂದು ಗುಂಪು ವ್ಯಾಪಕವಾಗಿ ಹರಡಿದ್ದರೆ ಅದರ ಸಾಮಾಜಿಕ ಸಂವಹನಕ್ಕೆ ಭಾಷೆಯು ಪರಿಣಾಮಕಾರಿಯಾಗಿ ಅಡ್ಡಿಯುಂಟು ಮಾಡುತ್ತದೆ. ಅದು ಸಾಧ್ಯವಾಗುವುದು ಒಂದೇ ಭಾಷೆ ಮಾತನಾಡುವ ಒಂದೆ ಗುಂಪಿಗೆ ಸೇರಿದವರ ನಡುವೆ ಮಾತ್ರ. ಹಿಂದಿನ ಪರಿಸ್ಥಿತಿ ಏನೇ ಇದ್ದರೂ ಸಾಮಾಜಿಕ ಸಂವಹನದ ಮೇಲೆ ಹತ್ತೊಂಬತ್ತನೆ ಶತಮಾನದ ಪ್ರಾರಂಭದಲ್ಲಿ ಜಾಕ್ಸನ್‌ನ ಪರಿಭಾಷೆಯನ್ನು ಬಳಸುವುದಾದರೆ 'ಅಧಿಕಾರ ಕ್ಷೇತ್ರ' ಪರಿಣಾಮಕಾರಿ ಮಿತಿಯನ್ನೊಡ್ಡಿದಾಗ ಭಾಷಾ ಗಡಿಗಳು ಜಾತಿಯ ಮಿತಿಯನ್ನು ನಿರ್ಧರಿಸುತ್ತಿದ್ದವು. ಯಾವುದೇ ಒಂದು ಭಾಷಾ ಪ್ರದೇಶದಲ್ಲಿ ಅಂತಹ ಗುಂಪುಗಳ ಸಂಖ್ಯೆ ಐವತ್ತಿಂದ ಇನ್ನೂರರಷ್ಟಿದ್ದವು. ಅವು ಐನೂರರಿಂದ ಎರಡು ಸಾವಿರದಷ್ಟು ಉಪವಿಭಾಗಗಳಾಗಿ ವಿಭಜಿತಗೊಂಡಿದ್ದವು. ಒಬ್ಬ ವ್ಯಕ್ತಿಯ ಸಮುದಾಯದ ಭಾವನೆಯು ಇವುಗಳಲ್ಲಿ ಅವನು ಅಥವಾ ಅವಳು ಜನಿಸಿದ ಯಾವುದಾದರೊಂದರಲ್ಲಿ ಕಾಣಿಸಿಕೊಳ್ಳುತ್ತಿತ್ತು. ಆದರೆ ನಾಗರಿಕ ಬದುಕಿಗೆ ಸಂಬಂಧಿಸಿದಂತೆ ಪ್ರಮುಖವಾದ ಗುಂಪು ಅವನ ಸ್ಥಾನಮಾನವನ್ನು ನಿರ್ಧರಿಸುತ್ತಿತ್ತು.

ಪ್ರತಿ ಭಾಷಾ ಪ್ರದೇಶದಲ್ಲಿದ್ದ ಪ್ರಮುಖ ಗಂಪುಗಳಲ್ಲಿ ಬ್ರಾಹ್ಮಣ ನಾಗರಿಕತೆಯ ಚಿಂತನೆಗಳನ್ನು ನಿಧಾನವಾಗಿ ಅಂತರ್ಗತ ಮಾಡಿಕೊಳ್ಳುತ್ತಿದ್ದ ಸುಮಾರು ಅರ್ಧ ಡಜನ್‌ನಷ್ಟು ಪ್ರಾಚೀನ ಬುಡಕಟ್ಟುಗಳಿದ್ದವು. ಅವರು ಹಳ್ಳಿಯ ಅಥವಾ ಪಟ್ಟಣದ ಸದಸ್ಯರಾಗಿ ಜೀವಿಸದೆ ತಮ್ಮದೇ ಆದ ಗುಡಾರಗಳಲ್ಲಿ ಬದುಕುತ್ತಿದ್ದರು ಮತ್ತು ಅವರನ್ನು ಬ್ರಾಹ್ಮಣೀಕರಣಗೊಂಡ ಜನರು ದೂರವಿರಿಸಿದ್ದರು. ಇತರ ಜಾತಿಗಳು ವ್ಯಾಖ್ಯಾನಿಸಿದ ಹಾಗೆ ಬ್ರಾಹ್ಮಣರ ಆದರ್ಶಗಳನ್ನು ಅನುಕರಿಸುವ ಬಯಕೆ ಮಾತ್ರವಲ್ಲದೆ ಇತರ ಜಾತಿಗಳೊಡನೆ

ಅವರ ಆರ್ಥಿಕ ಚಟುವಟಿಕೆಗಳ ವಿನಿಮಯದ ಮೂಲಕ ಇತರರೊಂದಿಗೆ ಸಾಮಾಜಿಕ ಸಾಮರಸ್ಯವನ್ನು ಅವರು ಹೊಂದಿದ್ದರು. ಅರ್ಧ ಡಜನ್‌ನಿಂದ ಒಂದು ಡಜನ್‌ವರೆಗೆ ಅಲ್ಲಿರುತ್ತಿದ್ದ ಅಲೆಮಾರಿ ಜಾತಿಗಳು ಹೆಚ್ಚು ಕಡಿಮೆ ಅದೇ ಪರಿಸ್ಥಿತಿಯಲ್ಲಿದ್ದವು. ಬಹಳಷ್ಟು ಕರಕುಶಲ ಜಾತಿಗಳಿದ್ದ ಐದರಿಂದ ಹದಿನೈದು ಗುಂಪುಗಳು ಪಟ್ಟಣದಲ್ಲಿ ವಿಶೇಷವಾಗಿದ್ದವು. ಅಲ್ಲಿ ಸಾಮಾಜಿಕ ಸಾಂಗತ್ಯವು ಗುಂಪುಗಳ ನಡುವಿನ ಸಹಕಾರವನ್ನು ಅವಲಂಬಿಸಿರದೆ ಸಮಾನ ಆಡಳಿತ ವ್ಯವಸ್ಥೆಯಿಂದ ರೂಪಿತಗೊಂಡಿತ್ತು. ಇನ್ನುಳಿದ ಜಾತಿಗಳು ಹಳ್ಳಿಗಳಲ್ಲಿ ಹಂಚಿಹೋಗಿದ್ದವು. ಪ್ರತಿಯೊಂದು ಹಳ್ಳಿಯಲ್ಲೂ ಹದಿನೈದರಿಂದ ಮೂವತ್ತು ಜಾತಿಗಳಿದ್ದವು. ಜಾತಿ ಸಮಾಜವು ಸಹಕಾರ ಮತ್ತು ಪರಸ್ಪರ ಅವಲಂಬನೆಯಂತಹ ಇತರ ಅಂಶಗಳನ್ನು ಪ್ರಕಟಪಡಿಸುತ್ತಿದ್ದುದು ಹಳ್ಳಿಯಲ್ಲೆ. ಮತ್ತು ಹಳ್ಳಿಯ ಸಾಮಾಜಿಕ ಮತ್ತು ಆರ್ಥಿಕ ಬದುಕಿನಲ್ಲಿ ವಿಭಿನ್ನ ಜಾತಿಗಳನ್ನೊಳಗೊಂಡ ಅದರಲ್ಲಿ ಪ್ರತಿಯೊಂದೂ ನಿಶ್ಚಿತವಾದ ಸ್ಥಾನಮಾನವನ್ನು ಹೊಂದಿದ ಶಾಶ್ವತವಾದ ಅಧಿಕಾರಿಗಳು ಮತ್ತು ಶ್ರಮಜೀವಿಗಳನ್ನು ಒಳಗೊಂಡ ಲಕ್ಷಣಗಳನ್ನು ಗ್ರಾಮೀಣ ಸಮಾಜಗಳು ಹೊಂದಿದ್ದವು. ಭಾರತದ ವಿಂಧ್ಯಾದಿಂದ ದಕ್ಷಿಣದಲ್ಲಿ ವ್ಯವಸ್ಥೆಯು ಅತ್ಯಂತ ಉನ್ನತ ಮಟ್ಟದಲ್ಲಿ ಬೆಳೆದಿತ್ತು, ಮತ್ತು ಅಂತಹ ಗಣ್ಯ ವ್ಯಕ್ತಿಗಳ ಸಂಖ್ಯೆ ಹನ್ನೆರಡರಿಂದ ಇಪ್ಪತ್ನಾಲ್ಕರಷ್ಟಿದ್ದವು ಮತ್ತು ಅಷ್ಟೇ ಸಂಖ್ಯೆಯ ಜಾತಿಗಳಿದ್ದವು. ಇಂತಹ ವ್ಯಕ್ತಿಗಳ, ಅವರ ಜಾತಿಯ ಸ್ಥಾನಮಾನ ಏನೆ ಇರಲಿ, ಅಭಿಪ್ರಾಯಗಳಿಗೆ ನಾಗರಿಕ ವ್ಯವಹಾರಗಳಲ್ಲಿ ಮಾತ್ರ ಸೀಮಿತವಾಗಿರದೆ ಯಾವುದೇ ಜಾತಿಗೆ ಸೇರಿದ, ಹಳ್ಳಿಯಲ್ಲಿ ವಾಸಿಸುವ ವ್ಯಕ್ತಿಯ ಸಾಮಾಜಿಕ ಮತ್ತು ಕಾನೂನಾತ್ಮಕ ಖಾಸಗಿ ವಿಷಯಗಳಲ್ಲೂ ಅವರ ಅಭಿಪ್ರಾಯಗಳಿಗೆ ಬೆಲೆ ಇತ್ತು. ಉತ್ತರ ಭಾರತದಲ್ಲಿ ಗ್ರಾಮೀಣ ಸೇವಕರ ವ್ಯವಸ್ಥೆಯು ದಕ್ಷಿಣದಷ್ಟು ವ್ಯವಸ್ಥಿತವಾಗಿ ವಿಕಾಸಗೊಳ್ಳದಿದ್ದರೂ ಕೂಡ ವಿವಿಧ ಗುಂಪುಗಳ ನಡುವೆ ಸಾಮರಸ್ಯ ಬೆಳೆಸುವ ಉದ್ದೇಶವನ್ನು ಈಡೇರಿಸುತ್ತಿತ್ತು. ಪ್ರಬಲ ಜಾತಿಗಳು ತಮ್ಮ ಪ್ರಾಬಲ್ಯವನ್ನು ಹೇರಿದ ನಂತರ ಅಲ್ಲಿದ್ದ ಗ್ರಾಮದ ಗಣ್ಯರ ಮಹತ್ವ ಕಡಿಮೆಯಾಗುತ್ತಾ ಹೋಯಿತು. ಪ್ರಚಲಿತದಲ್ಲಿದ್ದ ಭೂಹಿಡುವಳಿ, ಮತ್ತು ಕಂದಾಯ ವ್ಯವಸ್ಥೆಯಿಂದಾಗಿ ಮತ್ತು ಅವರ ಸೇವಕ ಮನೋಭಾವದಿಂದಾಗಿ ಗ್ರಾಮೀಣ ಗಣ್ಯರಿಗೆ ನಾಗರಿಕ ವ್ಯವಹಾರದಲ್ಲಿ ಯಾವುದೇ ಸ್ಥಾನಮಾನವಿರಲಿಲ್ಲ. ಪ್ರಬಲ ಜಾತಿಗಳ ಸದಸ್ಯರ ಖಾಸಗಿ ವ್ಯವಹಾರಗಳಲ್ಲಿ ಅವರನ್ನು ಸಂಪರ್ಕಿಸುವ ಸಾಧ್ಯತೆ ಬಹಳ ಕಡಿಮೆ ಇತ್ತು. ಆದರೆ ತನ್ನ ಭವ್ಯ ಕಾಲದಲ್ಲಿ ಒಂದು ಗ್ರಾಮ ಅಥವಾ ಪಟ್ಟಣವು ಎಲ್ಲ ಜಾತಿಗಳಿಂದ ಮತ್ತು ಆ ಪ್ರದೇಶದ ಎಲ್ಲ ವೃತ್ತಿಯವರಿಂದ ಆಯ್ಕೆಯಾದ ಹಿರಿಯರ ಸಮಿತಿಯನ್ನು ಹೊಂದಿತ್ತು.

ಕಂದಾಯದ ವಿಷಯಕ್ಕೆ ಸಂಬಂಧಿಸಿದಂತೆ ಇಡಿ ಗ್ರಾಮವು ಸ್ಥಳೀಯ ಸರ್ಕಾರದ ಜೊತೆ ವ್ಯವಹರಿಸಬೇಕಾಗಿತ್ತು. ಇದು ಭೂಮಿಯೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿದ ಗ್ರಾಮೀಣ ಜನರ ಸಮುದಾಯಗಳ ನಡುವೆ ಒಂದು ಬಗೆಯ ಗಟ್ಟಿಯಾದ ಐಕಮತ್ಯವನ್ನು ಹುಟ್ಟು ಹಾಕಿತು. ಗ್ರಾಮೀಣ ಸಮುದಾಯಗಳಲ್ಲಿದ್ದ ಸ್ಥಿರತೆ, ಸಹಕಾರಿ ಮನೋಭಾವ, ಮತ್ತು ಒಗ್ಗಟ್ಟನ್ನು ನೋಡಿದ ಮತ್ತು ವ್ಯಕ್ತಿಗಳಿಂದ ನೇರವಾಗಿ ಕಂದಾಯ ವಸೂಲಿ ಮಾಡುವ ವ್ಯವಸ್ಥೆಯನ್ನು ತೀವ್ರವಾಗಿ ವಿರೋಧಿಸಿದ ಸರ್ ಚಾರ್ಲ್ಸ್ ಮೆಟ್‌ಕಾಫ್ ಹೀಗೆ ಉದ್ಧರಿಸುತ್ತಾನೆ: "ಗ್ರಾಮೀಣ ಸಮುದಾಯಗಳು ತಮಗೆ ಬೇಕಾದುದೆಲ್ಲವನ್ನೂ ತಮ್ಮಲ್ಲೇ ಇರಿಸಿಕೊಂಡಿರುವ ಸಣ್ಣ ಗಣರಾಜ್ಯಗಳಾಗಿವೆ ಮತ್ತು ಹೊರ ಅವಲಂಬನೆಗಳಿಂದ ಸಂಪೂರ್ಣವಾಗಿ ಮುಕ್ತವಾಗಿವೆ. ಬೇರಾವುದೂ ಮಾಡದ ರೀತಿಯಲ್ಲಿ ಅವು ತಮ್ಮನ್ನು ಉಳಿಸಿಕೊಂಡು ಬಂದಿವೆ, ಹಲವಾರು ರಾಜವಂಶಗಳು ನಶಿಸಿ ಹೋಗಿವೆ; ಕ್ರಾಂತಿಗಳ ನಂತರ ಕ್ರಾಂತಿಗಳಾಗಿವೆ; ಹಿಂದೂ, ಪಠಾಣ, ಮೊಗಲ್, ಮರಾಠ, ಸಿಖ್, ಇಂಗ್ಲಿಷ್ ಎಲ್ಲವೂ ಒಂದರ ನಂತರ ಮತ್ತೊಂದು ಆಳ್ವಿಕೆ ನಡೆಸಿವೆ; ಆದರೆ ಗ್ರಾಮೀಣ ಸಮುದಾಯಗಳು ಹಾಗೆಯೆ ಉಳಿದುಕೊಂಡು ಬಂದಿವೆ. ಸಂಕಷ್ಟ

ಕಾಲದಲ್ಲಿ ಶಸ್ತ್ರ ಹಿಡಿದು ಅವು ತಮ್ಮನ್ನು ರಕ್ಷಿಸಿಕೊಂಡು ಬಂದಿವೆ; ವಿರೋಧಿ ಸೈನ್ಯವು ದೇಶದ ಮೂಲಕ ಹಾದು ಹೋಗುತ್ತದೆ; ಗ್ರಾಮೀಣ ಸಮುದಾಯಗಳು ತಮ್ಮ ದನಗಳನ್ನು ಗೋಡೆಯೊಳಗೆ ರಕ್ಷಿಸುತ್ತಾರೆ; ಮತ್ತು ಯಾವುದೇ ಪ್ರಚೋದನೆಗೆ ಆಸ್ಪದ ಕೊಡದೆ ಶತ್ರು ಸೈನ್ಯವು ಮುಂದೆ ಹೋಗಲು ಬಿಡುತ್ತಾರೆ. . . . .ದೇಶವು ನಿರಂತರ ದಾಳಿಗೊಳಗಾಗಿ ಎಲ್ಲವೂ ಜನರು ವಾಸಿಸದ ರೀತಿಯಲ್ಲಿ ಧ್ವಂಸವಾದರೆ ಚದುರಿ ಹೋದ ಹಳ್ಳಿಯ ಜನರು ಶಾಂತಿ ಸ್ಥಾಪನೆಯಾದ ನಂತರ ಅಲ್ಲಿಗೆ ಮರಳುತ್ತಾರೆ. ಮಕ್ಕಳು ತಮ್ಮ ಪಿತೃಗಳ ಸ್ಥಾನಕ್ಕೆ ಬರುತ್ತಾರೆ; ಅದೇ ಹಳ್ಳಿಯ ಸ್ಥಳ, ಅದೇ ಜಾಗದಲ್ಲಿ ಮನೆಗಳು, ಅದೇ ಭೂಮಿಯನ್ನು ಹಳ್ಳಿಯನ್ನು ಬಿಟ್ಟು ಹೋದ ಜನರ ವಂಶಜರು ಪಡೆದುಕೊಳ್ಳುತ್ತಾರೆ; ಅವರನ್ನು ಅಲ್ಲಿಂದ ಆಚೆ ದಬ್ಬಿದ್ದು ಸಣ್ಣ ವಿಷಯವೇನಲ್ಲ, ಗಲಭೆಯ ಕಾಲದುದ್ದಕ್ಕೂ ಅವರು ತಮ್ಮ ನಿಲುವನ್ನು ಕಾಪಾಡಿಕೊಂಡು ಬರುತ್ತಾರೆ ಮತ್ತು ಅಂತಹ ವಿಧ್ವಂಸವನ್ನು ಯಶಸ್ವಿಯಾಗಿ ಎದುರಿಸಲು ಬೇಕಾದ ಶಕ್ತಿಯನ್ನು ಪಡೆದುಕೊಳ್ಳುತ್ತಾರೆ. ಸರ್ಕಾರದ ಹಿತಾಸಕ್ತಿಗೆ ಪೂರಕವಾಗಿ ಎಲ್ಲರೂ ಒಗ್ಗಟ್ಟಾಗಿ ಕ್ರಿಯಾಶೀಲರಾಗುತ್ತಾರೆ, ಮತ್ತು ಅವರದೇ ಆದ ಪ್ರತ್ಯೇಕ ಹಿತಾಸಕ್ತಿಗಳನ್ನು ರೂಢಿ ಸಂಪ್ರದಾಯದ ಪ್ರಕಾರ ತಮ್ಮತಮ್ಮಲ್ಲೆ ಸರಿಹೊಂದಿಸಿಕೊಳ್ಳುತ್ತಾರೆ.

ಮರಾಠ ದೇಶದಿಂದ ನಮಗೆ ಬಂದಿರುವ ಗ್ರಾಮ ಸಮಿತಿಗಳ ನಿರ್ಣಯಗಳು, ಅಸ್ಪೃಶ್ಯರಾದ ಮಹಾರ್ ಮತ್ತು ಮಾಂಘ್‌ಗಳನ್ನೂ ಒಳಗೊಂಡು, ಎಲ್ಲ ಗ್ರಾಮ ಸೇವಕರ ಸಹಿಗಳನ್ನು ಒಳಗೊಂಡಿವೆ. ಹದಿನೆಂಟನೆಯ ಶತಮಾನದ ಮಧ್ಯಭಾಗದಲ್ಲಿ ಆನಂದರಂಗ ಪಿಳ್ಳೈಯವರ ಖಾಸಗಿ ದಿನಚರಿಯಲ್ಲಿ ದೇವಸ್ಥಾನವನ್ನು ಅಪವಿತ್ರಗೊಳಿಸರುವುದನ್ನು ಪರಿಶೀಲಿಸಲು ಸಭೆ ಕರೆದಿರುವ ಬಗ್ಗೆ ಉಲ್ಲೇಖವಿದೆ. “ಇಲ್ಲಿ ಬ್ರಾಹ್ಮಣರಿಂದ ಹಿಡಿದು ಪರಯ್ಯಾವರೆಗೆ ಎಲ್ಲ ಜಾತಿಯ ಜನರು ಇದ್ದರು.” ಬ್ರಾಹ್ಮಣ ಮತ್ತು ಶೂದ್ರರಿಬ್ಬರೂ ಭಾಗವಹಿಸಿದ ಸಭೆಯ ಬಗ್ಗೆ ಮಥಾಯ್ ಉಲ್ಲೇಖಿಸುತ್ತಾರೆ. ಅಲ್ಲಿ ತನ್ನ ವಿದ್ಯಾರ್ಥಿಯೊಬ್ಬನನ್ನು ಅತ್ಯಂತ ಕಠಿಣ ಶಿಕ್ಷೆಗೊಳಪಡಿಸಿದ್ದ ಬ್ರಾಹ್ಮಣ ಶಾಲಾ ಮಾಸ್ಟರ್ ಒಬ್ಬ ಆಪಾದಿತನಾಗಿದ್ದನು. ಬ್ರಾಹ್ಮಣ ಸದಸ್ಯರು ಜಗಲಿಯ ಮೇಲೆ ಮತ್ತು ಶೂದ್ರ ಸದಸ್ಯರು ಜಗಲಿಯ ಕೆಳಗೆ ಕುಳಿತಿದ್ದರು. ಎರಡೂ ಗುಂಪಿನವರು ಎಲೆಯಡಿಕೆ ಮತ್ತು ಹೊಗೆಸೊಪ್ಪಿನ ನಶ್ಯವನ್ನು ಎಗ್ಗಿಲ್ಲದೆ ಬಳಸುತ್ತಿದ್ದರು. ಪೂನಾದ ಪೇಶ್ವಾಗಳ ಮತ್ತು ಸತಾರದ ರಾಜನ ದಿನಚರಿಗಳಲ್ಲಿ ಬ್ರಾಹ್ಮಣರ ನಡುವಿನ ಜಗಳಗಳು ಅಥವಾ ಅವರ ಗೃಹಕೃತ್ಯಕ್ಕೆ ಸಂಬಂಧಿಸಿದಂತೆ ಅಧಿಕೃತವಾದ ಸಲಹೆಗಳನ್ನು ನೀಡಲು ಸೇರುತ್ತಿದ್ದ ಸಮಗ್ರ ಗ್ರಾಮದ ಸಮಿತಿಯ ಸಭೆಗಳ ಬಗ್ಗೆ ಕೆಲವು ಉಲ್ಲೇಖಗಳಿವೆ. ಬ್ರಾಹ್ಮಣ ಕುಲಕರ್ಣಿಯ ಮಗನೊಬ್ಬನು ಎರಡು ಹೆಂಡಿರನ್ನು ವಿವಾಹವಾಗಿದ್ದನು, ಅದರಲ್ಲಿ ಒಬ್ಬಳು ಕೇವಲ ಎರಡು ಹೆಣ್ಣು ಮಕ್ಕಳಿಗೆ ಜನ್ಮವಿತ್ತಿದ್ದಳು. ಅವನ ಮಗ ಇದ್ದಕ್ಕಿದ್ದಂತೆ ಮರಣ ಹೊಂದಿದಾಗ ಅವನ ಹಿರಿಯ ಹೆಂಡತಿ ತಾನೂ ಬೆಂಕಿಗೆ ಹಾರಲು ನಿರ್ಧರಿಸಿದಳು. ಗ್ರಾಮದ ಗಣ್ಯರನ್ನೊಳಗೊಂಡು ಇಡಿ ಗ್ರಾಮದ ಸಭೆಯನ್ನು ಕರೆಯಲಾಯಿತು. ವಯಸ್ಸಾದ ವೃದ್ಧನ ಪರಿಸ್ಥಿತಿಯನ್ನು ಗಮನಿಸಿದ ಸಭೆಯು ಅವಳು ಬೆಂಕಿಯ ಪ್ರವೇಶ ಮಾಡುವ ಮೊದಲು ಒಬ್ಬ ಮಗನನ್ನು ದತ್ತು ತೆಗೆದುಕೊಳ್ಳಬೇಕೆಂದು ತೀರ್ಮಾನಿಸಿತು ಮತ್ತು ತೀರ್ಮಾನವನ್ನು ಆ ವೃದ್ಧ ಮತ್ತು ಅವನ ಸೊಸೆ ಒಪ್ಪಿಕೊಂಡರು. ಸಂಬಂಧಪಟ್ಟ ವ್ಯಕ್ತಿಗಳೊಂದಿಗೆ ಸಮಾಲೋಚಿಸಿದ ಇಡಿ ಸಭೆಯು ದತ್ತು ತೆಗೆದುಕೊಳ್ಳಬೇಕಾದ ವ್ಯಕ್ತಿಯನ್ನು ಆಯ್ಕೆ ಮಾಡಿ ಅವನ ಪರವಾಗಿ ಪೋಷಕರನ್ನು ಕೇಳಿಕೊಂಡಿತು. ವಂಶಪಾರಂಪರ್ಯವಾಗಿ ಬಂದ ಹಕ್ಕುಗಳಿಗೆ ಸಂಬಂಧಿಸಿದಂತೆ ಇಬ್ಬರು ಬ್ರಾಹ್ಮಣ ಸಂಬಂಧಿಗಳ ನಡುವಿನ ಜಗಳವನ್ನು ಗ್ರಾಮದ ಸಮಗ್ರ ಸಭೆಗೆ ವಹಿಸಲಾಯಿತು. ನಿರ್ಣಯವನ್ನು ತೆಗೆದುಕೊಳ್ಳಬೇಕಾದ ಸಭೆಯಲ್ಲಿ ಮಾರಾಠರು,

ದಂಗಾರರು ಗೌರವ್‌ರು, ಸುತಾರರು, ಲೋಹಾರರು, ಕುಂಬಾರರು, ಕೋಲಿಗಳು, ನಾವಿಗಳು, ಚಂಬಾರರು, ಮಹಾರರು, ಮತ್ತು ಮಾಂಗ್‌ಗಳು ಇದ್ದರು.

ಸ್ಥಾನಮಾನದ ಚಿಂತನೆಗಳನ್ನು ಸುಮ್ಮನೆ ಒಪ್ಪಿಕೊಳ್ಳಲಾಯಿತು. ಇದು ದಕ್ಷಿಣ ಭಾರತದ ಗ್ರಾಮೀಣ ಸಮುದಾಯಗಳು ಪ್ರತಿನಿಧಿಸುತ್ತಿದ್ದ ವಿವಿಧ ಜಾತಿ-ಗುಂಪುಗಳಲ್ಲಿದ್ದ ಆರೋಗ್ಯಕರ ಸಹಕಾರ ಮತ್ತು ನೆರೆಹೊರೆಯ ಭಾವನೆಗಳಿಗೆ ಅಡ್ಡಿ ಬರಲಿಲ್ಲ. ಉತ್ತರ ಭಾರತಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಬಹುಶಃ ಗ್ರಾಮೀಣ ಬದುಕಿನಲ್ಲಿ ಅಷ್ಟರಮಟ್ಟಿನ ಸಹಕಾರ ಕಂಡುಬರುವುದಿಲ್ಲವಾದರೂ ಆಹಾರ ಮತ್ತು ಸಾಮಾಜಿಕ ಸಂವಹನದ ಆಚರಣೆಯಲ್ಲಿ ಜಾತಿ ವ್ಯವಸ್ಥೆಯು ಹೆಚ್ಚು ಉದಾರವಾದಿ ನಿಲುವು ತಳೆದಿತ್ತು. ಗ್ರಾಮದ ಸಾಮಾನ್ಯ ಬದುಕಿಗೆ ತಮಗೆ ವಹಿಸಲಾದ ಸೇವೆಯನ್ನು ಸಲ್ಲಿಸುತ್ತಿರುವವರೆಗೆ ನಾಗರಿಕ ಬದುಕಿನ ಉದ್ದೇಶಕ್ಕಾಗಿ ವಿವಿಧ ಜಾತಿಗಳನ್ನು ಒಟ್ಟಾಗಿ ಹಿಡಿದಿಡಲಾಗಿತ್ತು. ಜಾತಿಗಳ ಪರಸ್ಪರ ಅವಲಂಬನೆ ಎಷ್ಟು ಆಳವಾಗಿ ಬೇರು ಬಿಟ್ಟಿತ್ತೆಂದರೆ ಅದು ವ್ಯವಸ್ಥೆಯಲ್ಲಿ ಅಂತರ್ಗತವಾಗಿರುವ ಅಂಶಗಳು ಸಹವರ್ತಿಗಳ ಬಗೆಗಿರುವ ಮಾನವೀಯ ಸಹಾನುಭೂತಿ ಮತ್ತು ಸಾಮಾನ್ಯವಾಗಿರುವ ನಾಗರಿಕ ಗುರಿಗಳ ಚಿಂತನೆಗಳಿಗಿಂತ ಜಾತಿ-ಭಾವ ಅಥವಾ ಜಾತಿ-ಭಕ್ತಿ ಗಟ್ಟಿಯಾಗುವುದನ್ನು ತಪ್ಪಿಸಿತು. ಗ್ರಾಮೀಣ ಸಾಮಾಜಿಕ ಮತ್ತು ಆರ್ಥಿಕ ಬದುಕಿನಲ್ಲಿನ ಪರಸ್ಪರ ಅವಲಂಬನೆಯು ಜಾತಿಯ ಸಾಮಾಜಿಕ ನಿರ್ಬಂಧಗಳು ಕೇಂದ್ರಾಭಿಮುಖ ಬಲವಾಗಿದ್ದರೆ ನಿರ್ದಿಷ್ಟವಾದ ವಿಶೇಷ ಕಾರ್ಯಗಳು ಹಾಗೂ ಸಂದರ್ಭಗಳು ಸಾಮಾನ್ಯವಾಗಿ ಕೆಳಗಿನವು ಎಂದು ಗುರುತಿಸಲಾದ ಕೆಲವು ಜಾತಿಗಳಿಗೆ ಅವುಗಳ ಮಹತ್ವವನ್ನು ನೆನಪು ಮಾಡಿಕೊಡುತ್ತಿದ್ದವು ಮತ್ತು ಕೆಲವೊಮ್ಮೆ ಅವುಗಳಿಗೆ ತಾತ್ಕಾಲಿಕವಾದ ಹಿರಿತನದ ಭಾವನೆ ಉಂಟಾಗುವಂತೆ ಮಾಡುತ್ತಿದ್ದವು.

ಉತ್ತರ ಪ್ರದೇಶದ ಕೆಲವು ಭಾಗಗಳಲ್ಲಿ ಕೆಲವೊಮ್ಮೆ ಕ್ಷೌರಿಕನು ವಧು-ವರರನ್ನು ಹುಡುಕಿಕೊಡುವ ಪಾತ್ರವನ್ನು ನಿರ್ವಹಿಸುತ್ತಾನೆ ಮತ್ತು ವಿವಾಹದಲ್ಲಿ ಅವನು ಉಪಸ್ಥಿತನಿರುತ್ತಾನೆ. ಬನಾರಸ್ಸಿನ ಹೆಣಗಳನ್ನು ಸುಡುವ ಘಾಟ್‌ನಲ್ಲಿರುವ ಡಾಮ್ ಪ್ರಮುಖವಾದ ವ್ಯಕ್ತಿಯಾಗಿರುತ್ತಾನೆ. “ಕೆಲವು ವರ್ಷಗಳ ಹಿಂದೆ ಶ್ರೀಮಂತನ ಶವಸಂಸ್ಕಾರಕ್ಕೆ ಜಾತಿಯ ಮುಖ್ಯಸ್ಥನನ್ನು ಅವನ ಪಲ್ಲಕ್ಕಿಯಲ್ಲೆ ಕರೆತರಲಾಗುತ್ತಿತ್ತು.” ಚಿತೆಯನ್ನು ವ್ಯವಸ್ಥೆಗೊಳಿಸುವಲ್ಲಿ ಮೊದಲ ಐದು ಮರದ ತುಂಡಿಗಳನ್ನು ಡಾಮ್ ಕೊಡಬೇಕಾಗಿತ್ತು. ಅವನೇ ಚಿತೆಗೆ ಬುನಾದಿಯನ್ನು ನಿರ್ಮಿಸುತ್ತಿದ್ದ ಮತ್ತು ಚಿತೆಗೆ ಅಗ್ನಿ ಸ್ಪರ್ಶ ಮಾಡಬೇಕಿರುವ ದುಃಖತಪ್ತರಿಗೆ ಬೆಂಕಿಯ ಕಂತೆಯನ್ನು ಕೊಡುತ್ತಿದ್ದ. ಮಧ್ಯ ಪ್ರಾಂತ್ಯಗಳಲ್ಲಿ, ವಿವಾಹ ಸಮಾರಂಭದ ಭಾಗವಾಗಿ, ವರನ ಕಡೆಯವರು ವಿವಾಹವನ್ನು ಮಂಗಳಕರವಾಗಿಸಲು ವಧುವನ್ನು ಕುಂಬಾರನ ಮನೆಗೆ ಕರೆದುಕೊಂಡು ಹೋಗುತ್ತಿದ್ದರು. ಕುಂಬಾರನ ಹೆಂಡತಿಯು ವಧುವಿಗೆ ವಿವಾಹದಲ್ಲಿ ಉಪಯೋಗಿಸಬೇಕಾದ ಏಳು ಮಡಿಕೆಗಳನ್ನು ಕೊಡುತ್ತಿದ್ದಳು. ಇಂತಹ ಉಡುಗೊರೆಗೆ ಪ್ರತಿಯಾಗಿ ಮಹಿಳೆಗೆ ಬಟ್ಟೆಗಳ ಬಹುಮಾನ ದೊರೆಯುತ್ತಿತ್ತು. ಕುಣಬಿ ವಿವಾಹದಲ್ಲಿ ಕ್ಷೌರಿಕ ಮತ್ತು ಮಡಿವಾಳರಿಬ್ಬರೂ ಪ್ರಧಾನವಾಗಿರುತ್ತಿದ್ದರು. ವಿವಾಹದ ಒಂದು ನಿರ್ದಿಷ್ಟ ಸಂದರ್ಭದಲ್ಲಿ ಕ್ಷೌರಿಕ ಹಾಗೂ ಮಡಿವಾಳರು ವಧು ಹಾಗೂ ವರನನ್ನು ಹೆಗಲ ಮೇಲೆ ಕೂರಿಸಿಕೊಂಡು ವಿವಾಹಮಂಟಪದಲ್ಲಿ ನೃತ್ಯ ಮಾಡುತ್ತಿದ್ದರು. ಅದಕ್ಕಾಗಿ ಅವರಿಗೆ ಉಡುಗೊರೆ ಸಿಗುತ್ತಿತ್ತು. ವಿದರ್ಭದಲ್ಲಿ “ಹೋಳಿ ಹಬ್ಬದಲ್ಲಿ ಮಹಾರನ ಕೈಯಲ್ಲಿನ ಬೊಂತೆಗೆ ಮೊದಲು ಅಗ್ನಿ ಸ್ಪರ್ಶ ಮಾಡಲಾಗುತ್ತಿತ್ತು ನಂತರ ಅದರಿಂದ ಕುಣಬಿಗೆ ಅಗ್ನಿ ಸ್ಪರ್ಶವಾಗುತ್ತಿತ್ತು.” ಕೆಲವು ಗಾಣಿಗರು, ಲೋಹಾರರು, ಕುಣುಬಿಗಳು ಮತ್ತು ಇತರ ಜಾತಿಗಳು ಅವರ ವಿವಾಹದ ದಿನಾಂಕವನ್ನು ನಿರ್ಧರಿಸಲು ಮಾಹಾರನನ್ನು ನೇಮಿಸುತ್ತಿದ್ದರು. ದಸರಾದಲ್ಲಿ ಕೋಣನನ್ನು ಬಲಿ ಕೊಡುವ ಸಮಯದಲ್ಲೂ ಸಹ ಮಹಾರನು

ಉಪಸ್ಥಿತನಿರುತ್ತಿದ್ದ. ಕ್ಷೌರಿಕನು ವಿವಾಹ ಸಮಾರಂಭದಲ್ಲಿ ಬ್ರಾಹ್ಮಣನ ಸಹಾಯಕನಾಗಿ ಕೆಲಸ ಮಾಡುತ್ತಾನೆ ಮತ್ತು ಕೆಳಜಾತಿಗಳಲ್ಲಿ ಅವನು ವಧುವಿನ ಕಡೆಯ ಪುರೋಹಿತನಾಗಿಯೂ ಪಾತ್ರ ವಹಿಸುತ್ತಾನೆ. ಪ್ರಖ್ಯಾತ ಜಗನ್ನಾಥ ದೇವಸ್ಥಾನದಲ್ಲಿ ಕ್ಷೌರಿಕನು ಅಧಿಕೃತ ಪುರೋಹಿತನಾಗಿರುತ್ತಾನೆ. ಅವನು ತಯಾರಿಸಿದ ಅಡುಗೆ ಕಟ್ಟಾ ಸಂಪ್ರದಾಯಸ್ಥರನ್ನು ಹೊರತುಪಡಿಸಿ ಉಳಿದವರೆಲ್ಲರಿಗೂ ಒಪ್ಪಿಗೆಯಾಗುತ್ತದೆ. ಕೆಲವು ವೆಲ್ಲಾಳರಿಗೆ (ತಮಿಳು ಕೃಷಿಕರು) ಅವನು ವಿವಾಹದ ಪೌರೋಹಿತ್ಯವನ್ನೂ ಮಾಡುತ್ತಾನೆ. "ಬಹಳ ಹೆಸರುವಾಸಿಯಾದ ಮತ್ತು ವಿಶಿಷ್ಟವಾದ ಕೆಲವು ದೇವಸ್ಥಾನಗಳು ಕೆಲವು ನಿರ್ದಿಷ್ಟ ದಿನಗಳಂದು ಪರಾಯನ್‌ರಿಗೂ (ತಮಿಳು ಅಸ್ಪೃಶ್ಯರು) ತೆರೆದಿರುತ್ತದೆ ಮತ್ತು ಆ ಸಮಯದಲ್ಲಿ ಅವನು ಬ್ರಾಹ್ಮಣರಿಗಿಂತಲೂ ಪ್ರಮುಖನಾಗಿರುತ್ತಾನೆ." ಶಿವ ಅಥವಾ ಸ್ಥಳೀಯ ದೇವತೆಗಳ ಕೆಲವು ದೇವಸ್ಥಾನಗಳಲ್ಲಿ ಅವನು ಮೆರವಣಿಗೆಯ ಸಮಯದಲ್ಲಿ ಮೂರ್ತಿಯ ಪಕ್ಕದಲ್ಲಿ ಕೂರುತ್ತಾನೆ ಅಥವಾ ಅದರ ಕೊರಳಿಗೆ ವಿವಾಹದ ಪಟ್ಟಿಯನ್ನು (ತಾಳಿಯನ್ನು) ಕಟ್ಟುತ್ತಾನೆ. "ಗಡಿಯ ಬಗ್ಗೆ ತಕರಾರು ಎದ್ದಾಗ ಪರಾಯ್ಯನು ಅಥವಾ ಇತರೆಡೆಯಲ್ಲಿ ಆ ಜಾತಿಗೆ ಸಮನಾದ ಜಾತಿಯವನು ತನ್ನ ತಲೆಯ ಮೇಲೆ ಮಡಿಕೆ, ಮಗ ಮತ್ತು ಮಣ್ಣಿನ ಹೆಂಟೆಯನ್ನು ಇಟ್ಟುಕೊಂಡು ನಡೆಯುತ್ತಾನೆ." ಇಂತಹ ಅಥವಾ ಇತರ ಸಂದರ್ಭಗಳಲ್ಲಿ ಕೆಳಗಿನ ಜಾತಿ ಎಂದು ಕರೆಸಿಕೊಳ್ಳುವ ಜಾತಿಗಳು ತಮ್ಮ ಪ್ರಾಮುಖ್ಯ ಕಂಡುಕೊಳ್ಳುವ ಮೂಲಕ ತಮ್ಮ ನಿರಂತರ ಖಿನ್ನತೆಯಿಂದ ಮುಕ್ತವಾಗುತ್ತಿದ್ದವು ಮತ್ತು ಅವರ ಅವಮಾನಿತ ಬದುಕಿಗೆ ಒಂದು ಬಗೆಯ ಉತ್ಸಾಹವನ್ನು ತುಂಬುತ್ತಿದ್ದವು.

ಅಂತಿಮವಾಗಿ, ಪ್ರತಿ ಭಾಷಾವಾರು ಪ್ರಾಂತ್ಯದಲ್ಲಿ ಸುಮಾರು ಇನ್ನೂರರಷ್ಟು ಜಾತಿಗಳೆಂದು ಕರೆದುಕೊಳ್ಳುವ ಗುಂಪುಗಳಿದ್ದವು. ಸಾಮಾನ್ಯವಾಗಿ ಒಬ್ಬ ವ್ಯಕ್ತಿಯ ಸಾಮಾಜಿಕ ಸ್ಥಾನಮಾನವನ್ನು ಅವನ ಹುಟ್ಟು ನಿರ್ಧರಿಸುತ್ತಿತ್ತು. ಅವುಗಳು ಸುಮಾರು ಎರಡು ಸಾವಿರ ಸಣ್ಣ ಘಟಕಗಳಾಗಿ ವಿಭಜಿತವಾಗಿದ್ದವು – ಸಾಮಾನ್ಯವಾಗಿ ಉಪಜಾತಿಗಳು ಎಂದು ಅವುಗಳನ್ನು ಕರೆಯಲಾಗುತ್ತಿತ್ತು. ಅವು ವಿವಾಹದ ಮಿತಿಯನ್ನು, ಸಾಮಾಜಿಕ ಬದುಕಿನ ಪರಿಣಾಮಗಳನ್ನು ನಿಶ್ಚಯಿಸುತ್ತಿದ್ದವು ಮತ್ತು ಪ್ರತಿಯೊಂದಕ್ಕೂ ವಿಶಿಷ್ಟವಾದ ಸಾಂಸ್ಕೃತಿಕ ಸಂಪ್ರದಾಯಗಳನ್ನು ಸೃಷ್ಟಿಸಿದ್ದವು. ಇಂತಹ ಪ್ರಮುಖ ಗುಂಪುಗಳನ್ನು, ಕೆಲವು ಅಪವಾದಗಳನ್ನು ಹೊರತುಪಡಿಸಿ, ಪುರೋಹಿತಶಾಹಿಯು ಒಟ್ಟಿಗಿಡುತ್ತಿತ್ತು. ಇವೆಲ್ಲವನ್ನು ಸಮಗ್ರಗೊಳಿಸಿ ಮೇಲ್ನೋಟಕ್ಕೆ ಕಾಣುವಂತೆ ಅಥವಾ ಆಂತರಿಕವಾಗಿ ಮಾತ್ರ ಅರ್ಥವಾಗುವ ಹಾಗೆ ಐದು ಅಥವಾ ಆರು ಗುಂಪುಗಳನ್ನಾಗಿ ಮಾಡಲಾಗಿತ್ತು. ದೇಶದ ಬಹಳಷ್ಟು ಪ್ರದೇಶಗಳಲ್ಲಿ ಅವುಗಳನ್ನು ಗ್ರಾಮೀಣ ಸಮುದಾಯಗಳ ಆರ್ಥಿಕತೆ ಹಾಗೂ ಸಾರ್ವಜನಿಕ ನಾಗರಿಕ ಬದುಕಿನ ಉದ್ದೇಶಕ್ಕಾಗಿ ಒಟ್ಟಿಗಿರಿಸಲಾಗಿತ್ತು. ಸಾರ್ವಜನಿಕ ಬದುಕಿಗೆ ಸಮಾನವಾದ ಸೇವೆ, ಏಕಸ್ವಾಮ್ಯವನ್ನು ಹೊಂದಿರುವಂತಹ ಸೇವೆಗಳಿಗೆ ಸೂಚಿಸಲಾದ ಹಕ್ಕುಗಳು, ಮತ್ತು ಕೆಳಜಾತಿಗಳು ಎಂದು ಗುರುತಿಸಲ್ಪಟ್ಟ ಕೆಲವು ಜಾತಿಗಳ ಹೆಚ್ಚುಗಾರಿಕೆಯನ್ನು ತೋರಿಸುವ ನಿರ್ದಿಷ್ಟ ಸಂದರ್ಭಗಳು ಇವೆಲ್ಲವೂ ಗ್ರಾಮೀಣ ಸಮುದಾಯಗಳ ನಾಗರಿಕ ಬದುಕನ್ನು ಸಾಮಾರಸ್ಯದಿಂದ ಕೂಡಿದ ನಾಗರಿಕ ಘಟಕವನ್ನಾಗಿ ಮಾಡಿತ್ತು. ವ್ಯವಸ್ಥೆಯನ್ನು ಅದರ ವಿಶಾಲವಾದ ಚೌಕಟ್ಟಿನಲ್ಲಿ ಸಂಪೂರ್ಣವಾಗಿ ಒಪ್ಪಿಕೊಂಡಿದ್ದರಿಂದ ಮತ್ತು ಅಂತಹ ವ್ಯವಸ್ಥೆಯನ್ನು ಮತ್ತು ಗ್ರಾಮದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಪರಸ್ಪರಾವಲಂಬನೆಯನ್ನು ರೂಪಿಸಿದ್ದರಿಂದ ಗುಂಪುಗಳು ಪ್ರತ್ಯೇಕಗೊಂಡು ಇಡಿ ವ್ಯವಸ್ಥೆಯನ್ನೆ ಛಿದ್ರಗೊಳಿಸಿ ಸ್ವತಂತ್ರ ಗುಂಪುಗಳಾಗುವುದನ್ನು ತಪ್ಪಿಸಿತು. ನಾಗರಿಕ ಬದುಕಿನಲ್ಲಿ ಸಾಮರಸ್ಯವನ್ನು ಹುಟ್ಟುಹಾಕಿತು. ಈ ಸಾಮರಸ್ಯವು ಸಮಾನವಾಗಿರುವ ವಿವಿಧ ಭಾಗಗಳ ನಡುವಿನ ಸಾಮರಸ್ಯವಾಗಿರದೆ ಒಂದಕ್ಕೊಂದು ಸ್ಪಷ್ಟವಾಗಿ ಅಧೀನವಾಗಿರುವ ಸಾಮರಸ್ಯವಾಗಿತ್ತು ಎನ್ನುವುದಂತೂ ನಿಜ.

ಉಲ್ಲೇಖಗಳು
ಟಿಪ್ಪಣಿ: ಈ ಅಧ್ಯಾಯದಲ್ಲಿ ನಾನು ಕಾಲಾನುಕ್ರಮದಲ್ಲಿ ನೋಡುವುದಾದರೆ ಸುಮಾರು ಅರ್ಧ ಶತಮಾನದಷ್ಟು ಆಧುನಿಕರಾದ ಹಲವು ಲೇಖಕರನ್ನು ಉಲ್ಲೇಖಿಸಿದ್ದೇನೆ. ಆದರೆ ಇತರ ಮತ್ತು ಪ್ರಾಚೀನಕಾಲದ ಲೇಖಕರುಗಳನ್ನು ಹೆಚ್ಚು ಕಡಿಮೆ ಎಲ್ಲ ಕಡೆಗಳಲ್ಲೂ ಸೂಚಿಸಲಾಗಿದೆ. ಕಾರಣವೇನೆಂದರೆ ನಂತರದ ಲೇಖಕರು ಹೆಚ್ಚಿನ ವಿವರಗಳನ್ನು ನೀಡುತ್ತಾರೆ ಮತ್ತು ಹೆಚ್ಚಿನ ಜನರ ಗ್ರಹಿಕೆಗೆ ಸುಲಭವಾಗಿ ನಿಲುಕುತ್ತಾರೆ.

1. Baines p 11.
2. Quotation from Megasthanes' account in Wilson, vol I, p 347.
3. P 124, footnote.
4. The New Statesman, Special Supplement, 28th April 1917, p. 38
5. ಗುಜರಾತ್ ಬ್ರಾಹ್ಮಣರು ಆ ತರಹದ ಕೌನ್ಸಿಲ್ ಅನ್ನು ಹೊಂದಿರಲಿಲ್ಲ. ನೋಡಿ: Borradaile's Gujarat Caste Rules, Translated into Gujarati by Mangaldas Nathoobhoy.
6. Hultzsch, I, No. 56
7. United Provinces Census, 1911, p. 337
8. ಈ ಸತ್ಯದ ಫಲಿತಾಂಶವು ಹಿಂದೂ ಪವಿತ್ರ ಕಾನೂನುಗಳಲ್ಲಿ ನಿಗದಿಪಡಿಸಿದ ನಿಯಮಗಳಿಂದ ಅನೇಕ ಜಾತಿಗಳ ಪದ್ಧತಿಗಳ ನಿರ್ಗಮನದಲ್ಲಿ ಕಂಡುಬರುತ್ತದೆ. ನೋಡಿ: Steele, p 124 and Appendix A
9. United Provinces Census, 1911, p. 337

10. Bengal Census, 1911, pp 467-9
11. Ibid., p.487
12. Godavari Dist. Gaz. Vol. I, p.48
13. Russel, ii p. 31
14. Crooke, I pp. 45, 109; ii, pp. 93, 219, 326; iii, 247, 332; iv, 33, 43
15. M.R. Majumdar in Ghurye Facilitation Volume, p. 282.
16. Madras Census, 1871, p. 137.
17. M.G. Ranade in JBBRAS., vol. xx, p. 476.
18. Madras Census, 1871, p. 151 and footnote.
19. Mysore Census, 1901, p. 400

20. Martin, vol. ii, p. 466
21. UP Census, 1901, p. 227,
22. UP Census, 1901, p. 328,
23. UP Census, 1901, p. 212,
24. Risley, (2), p 159.
25. UP Census, 1911, p. 329, E.A.H. Blunt, pp. 90-94.
26. UP Census, 1911, p. 331,
27. Risley, (1), vol. ii, p. 270
28. Bengal Census, 1901, p. 367,
29. Ibid.

30. Ibid.
31. Forbes, ii, p. 240
32. Bhattacharya, p. 255
33. Wilson, vol. ii, pp 74-75
34. Ency of R & E vol. x, p. 491 (b).
35. Slater, p. 38
36. Trichinopoly Dist. Gaz., vol. I, p. 81.
37. Thurston, vi, p. 16
38. Bellary dist. Gaz., p. 58
39. Mann, p. 108

40. Russel, iv, p. 189
41. Thurston vi, p. 88
42. Russel, i, p. 72-3
43. Panjab Census, 1911, p. 413.
44. Briggs, p. 231
45. Ency of R and E, ix, p. 636 (b); also compare Forbes, ii p.238.
46. Ranade, p.478
47. Bhattacharya, p.259
48. Logan I, p. 85
49. Bhattacharya, p.259

50. Wilson, ii, p.77
51. Wilson, ii, p.79
52. Madras Census, 1891, p.224
53. G.W. Forrest, Official Writings of Mountstuart Elphinstone, 1884, pp. 310-11
54. Madras Census, 1871, p.129
55. D.V. Potdar, Marathi Gadyacha Ingraji Avatar, Appendix, pp. 42-3
56. Vad, Sawai Madhavrao, vol. iii, p. 280
57. Ranade, p.478; Vad ibid., p.287
58. Ibid., p. 478
59. Madras Census, 1891, p. 299

60. Bhattacharya pp. 19-20
61. Ranade p.456; Vad, Balaji Bajirao, vol. I, pp 306, 309, 337
62. Ibid., pp. 455
63. James Forbes, Oriental Memoirs, vol. I, 1834, p. 256
64. Holt Mackenzie in Minutes of Evidence Taken before the Select Committee on the affairs of the East India Company, vol. iii, 1832, p. 216
65. Rickards, I, p. 29
66. Campbell, Ethnology of India, p. 216
67. Wilson, ii, 151; also compare martin vol. I, p.111
68. Bhattacharya, p. 39
69. Wilson, ii, p. 115

70. Wilson, ii, p. 59
71. Ibid p. 188; also compare Malcolm ii, pp. 122-3
72. Wilson, ii, p. 67
73. Bhattacharya, pp 50-1
74. Baines, p. 28
75. Madras Census, 1871, p. 133
76. Bose ii, p. 27, quotation from Ain-i-Akbari
77. Salem Dist. Gaz 139-64; Tanjore Dist. Gaz., 81-88
78. Baines, p.59
79. Russel I p.9

80. Quoted in the Encyclopaedia Britannica (11th Edition), vol. v, p. 465 (a)
81. P. 19,
82. Ethnography p.11
83. Wester Marck, ii p. 59
84. Baines, p 59
85. Compare Malcolm, ii, p 162

86. Ency. Of R and E, vol. iii, p. 234
87. Martin I, p. 110
88. Panjab Census, 1911, p. 417
89. Bengal Census, 1901, p. 351

90. UP Census, 1911, p. 333
91. Ibid., p. 353,
92. Op. Cit. vol I, p. 10
93. Madras Census, 1901, p. 128; also compare Kerr, p., 279: "ಓರ್ವ ಸ್ಥಳೀಯನು ತಾನು ಬ್ರಾಹ್ಮಣನೆಂದು ಅಪರೂಪಕ್ಕೆ ಹೇಳುವುದನ್ನು ನೀವು ಕೇಳಬಹುದು. ಆದರೆ ಅವನ ಜಾತಿಯನ್ನು ಕೇಳಿದಾಗ ಅಂತಹವನು ಯಾವಾಗಲೂ ತನ್ನ ಉಪಜಾತಿಯನ್ನೋ ಅಥವಾ ತನಗೆ ಸೇರಿದ ವ್ಯಾಪಾರವನ್ನೋ ಅಥವಾ ಉದ್ಯಮವನ್ನೋ ತಿಳಿಸುತ್ತಾನೆ"
94. Salem Dist. Gazetteer, pp. 123-4
95. Rev. M.A. Sherring, Hindu Tribes and Castes, vol. I, 1872, p. xxii.
96. Madras Census, 1891, p. 234.
97. Gait, op. cit., p. 232,
98. UP Census, 1811, p. 354; Gait's observation may apply only to Gujarat.
99. Journal of the Asiatic Society of Bengal, 1907.

100. Baden Powell, p. 26; Altekar, p. 122. ನನ್ನ ಪ್ರಕಾರ ಪಠ್ಯದಲ್ಲಿನ ಆಲ್ಟೇಕರ್ ಅವರ ಅಭಿಪ್ರಾಯಗಳಿಗೆ ಸ್ವಲ್ಪ ಮಾರ್ಪಾಟಿನ ಅವಶ್ಯಕತೆ ಇದೆ ಎನಿಸುತ್ತದೆ.
101. Minutes of Evidence taken before the Select Committee on the affairs of the East India Company vol. iii (Revenue), 1832, 331-2 (Appendix 84).
102. Altekar, p. 43
103. Ibid., pp 35-6
104. Mathai p. 20
105. Vad, Madhavrao I, vol ii pp. 339, 341
106. Vad, Shahu Chatrapati pp. 174, 176, Ghurye (6) and (7),
107. Crooke (2), pp 102-29,
108. Russel iv, pp. 6, 10
109. Ibid, p. 20

110. Ibid., pp. 18, 131
111. Ibid, p. 265
112. Thurston, I pp. 32-4
113. Baines, pp 75-6